Revision Settlement Report of Zone No. XI	Chikkaballapur, Kolar District comprising Chikkaballapur Sidlaghatta, Gouribidanur, Gudibanda, Kolar, Bangarpet and Malur Taluks;
Revision Settlement Report of Zone No. XII	Chamarajanagar, Mysore District comprising Chamarajanagar, Yelandur and Gundlupet Taluks;
Revision Settlement Report of Zone No XIII	Hunsur, Mysore District comprising Hunsur, Heggadadevanakote and Periyapatna Taluks;
Revision Settlement Report of Zone No. XIV.	Mysore District comprising Mysore, Nanjangud and T. Narasipura Taluks;
Revision Settlement Report of Zone No. XV	Mandya and Mysore Districts comprising Mandya Maddur Malavalli, Srirangapatna, Pandavapura and Krishnarajanagar Taluks;
Revision Settlement Report of Zone No. XVI.	Hassan and Mandya Districts comprising Hassan, Holenarasipur, Arkalgud, Krishnarajapet and Nagamangala Taluks;
Revision Settlement Report of Kollegal Zone	Mysore District comprising Kollegal Taluk;
Revision Settlement Report of Zone No. I	Bellary District comprising Siraguppa, Bellary and Hospet Taluks excluding Chikkanahally Firka of Hospet Taluk;
Revision Settlement Report of Zone No. II	Kudligi, Bellary District comprising Kudligi, Sandur, Harapanahalli, Hadagali, Mallapura and Chikkanahally Firka of Hospet Taluk (Mariyammanahally);
Revision Settlement Report of Coorg Zone	Coorg District comprising Mercara, Virajpet and Somwarpet Taluks;

Revision Settlement Report of Udipi Zone	South Kanara District comprising Udipi, Koondapur, Mangalore and Karkal Taluks ;
Revision Settlement Report of Puttur Zone	South Kanara District comprising Puttur, Buntwal and Belthangadi Taluks."

Mr. SPEAKER (Resolution moved) :—

"That in pursuance of sub-section (1) of Section 121 of the the Mysore Land Revenue Act, 1964, this House approves the following Settlement Reports laid on the Table of the House on the 26th February 1965.

Revision Settlement Report of Zone No. K I	North Kanara District comprising Ankola, Bhatkal, Kumta, Honnawar, and Karwar Taluks ;
Revision Settlement Report of Zone No. K II	North Kanara District comprising Supa, Haliyal, Yellapur and Mundgod Taluks ;
Revision Settlement Report of Zone No. K III	North Kanara District comprising Siddapur and Sirsi Taluks
Revision Settlement Report of Zone No. K IV	Dharwar District comprising Dharwar, Kalghatgi, Shiggaon, Hangal and Hirekerur Taluks ;
Revision Settlement Report of Zone No. K V	Dharwar District comprising Hubli, Kundgol, Haveri, Byadgi and Ranibennur Taluks ;
Revision Settlement Report of Zone No. K VI	Dharwar District comprising Nargund, Ron, Navalgund, Mundargi, Shirahatti and Gadag Taluks ;
Revision Settlement Report of Zone No. K VII	Bijapur District comprising Indi, Shindagi and Bijapur Taluks ;
Revision Settlement Report of Zone No. K VIII	Bijapur District comprising Bagewadi, Muddebihal, Hungund, Bagalkot, Badami, Mudhol, Bilgi and Jamakhandi Taluks ;
Revision Settlement Report of Zone No. I	Belgaum District comprising Belgaum and Khanapur Taluks ;
Revision Settlement Report of Zone No. II	Belgaum comprising Chikodi, Hukkeri, Sampagaon (Bailhongal) and Gokak (18 Kundernad Villages only) ;

(MR. SPEAKER)

Revision Settlement Report of Zone No. III	Belgaum District comprising Athani, Rayabag, Gokak (Excepting 18 Kundernad Villages included in Zone No. II, Belgaum) Ramadurg and Parasgad (Saundatti) Taluks;
Revision Settlement Report of Bidar Zone	Bidar District comprising Bidar, Humnabad, Bhalki and Santapur (Aurad) Taluks;
Revision Settlement Report of Zone No. I	Gulbarga District comprising Gulbarga, Afzalpur, Alland, Chincholi and Chittapur Taluks;
Revision Settlement Report of Zone No. II	Gulbarga District comprising Seram, Yadgir, Sholapur and Jewargi Taluks.
Revision Settlement Report of Koppal Zone	Raichur District comprising Koppal, Yelburga and Kushtagi Taluks;
Revision Settlement Report of Lingsugur Zone	Raichur District comprising Lingsugur, Sindhanur and Manvi Taluks;
Revision Settlement Report of Zone No. I	Shimoga District comprising Sorab, Sagar, Shikaripur, Hosanagar and Thirthahalli Taluks;
Revision Settlement Report of Zone No. II	Chickmagalur and Hassan Districts comprising Chickmagalur, Mudigere, Koppa, Narasimharajapura, Sringeri, Manjarabad, Alur and Belur Taluks;
Revision Settlement Report of Zone No. III	Chickmagalur and Shimoga Districts comprising Tarikere, Kaduru, Shimoga and Bhadravathi Taluks;
Revision Settlement Report of Zone No. IV	Chitradurga and Shimoga Districts comprising Harihar, Davangere, Honnali and Channagiri Taluks;
Revision Settlement Report of Zone No. V	Chitradurga and Tumkur Districts comprising Chitradurga Holalkere, Hosadurga, Hiriyur, Sira, Madhugiri and Pavagada Taluks;
Revision Settlement Report of Zone No. VI	Chitradurga District comprising Chellakere, Jagalur and Molakalmuru Taluks;
Revision Settlement Report of Zone No. VII	Tumkur and Hassan Districts comprising Tiptur, Turuvekere, Chikkanaikanahalli, Arasikere and Channarayapatna Taluks;

Revision Settlement Report of Zone No. VIII	Bangalore Rural and Tumkur Districts comprising Hoskote, Devanahally, Doddaballapura, Magadi, Nelamangala, Kunigal, Gubbi, Tumkur and Koratagere Taluks ;
Revision Settlement Report of Zone No. IX	Bangalore comprising Bangalore South, Bangalore North, Anekal Ramanagaram, Kanakapura and Channapatna Taluks ;
Revision Settlement Report of Zone No. X	Kolar District comprising Bagepalli, Chintamani, Srinivasapura and Mulbagal Taluks ;
Revision Settlement Report of Zone No. XI	Chikkaballapur, Kolar District comprising Chikkaballapur Sidlaghatta, Gouribidanur, Gudibanda, Kolar, Bangarpet and Malur Taluks ;
Revision Settlement Report of Zone No. XII	Chamarajanagar, Mysore District comprising Chamarajanagar, Yelandur and Gundlupet Taluks ;
Revision Settlement Report of Zone No. XIII	Hunsur, Mysore District comprising Hunsur, Heggadadevanakote and Periyapatna Taluks ;
Revision Settlement Report of Zone No. XIV	Mysore District comprising Mysore, Nanjangud and T.Narasipura Taluks ;
Revision Settlement Report of Zone No. XV	Mandya and Mysore Districts comprising Mandya, Maddur, Malavalli, Srirangapatna, Pandavapura and Krishnarajanagar Taluks ;
Revision Settlement Report of Zone No. XVI	Hassan and Mandya Districts comprising Hassan, Holenarasipur, Arkalgud, Krishnarajpet and Nagamangala Taluks ;
Revision Settlement Report of Kollegal Zone	Mysore District comprising Kollegal Taluk ;
Revision Settlement Report of Zone No. I.	Bellary District comprising Siraguppa, Bellary and Hospet Taluks excluding Chikkanahally Firka of Hospet Taluk ;
Revision Settlement Report of Zone No. II	Kudligi, Bellary District comprising Kudligi, Sandur, Harapanahally, Hadagali, Mallapura and Chikkanahalli Firka of Hospet Taluk (Mariyammanahally) ;
Revision Settlement Report of Coorg Zone	Coorg District comprising Mercara, Virajpet and Somwarpet Taluks ;

(MR. SPEAKER)

Revision Settlement Report of Udipi Zone	South Kanara District comprising Udipi, Koondapur, Mangalore and Karkal Taluks ;
Revision Settlement Report of Puttur Zone	South Kanara District comprising Puttur, Buntwal and Belthangadi Taluks."

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ರಿವಿಷನ್ ಸೆಟಲ್‌ಮೆಂಟ್ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಭೆಯ ಮುಂದೆ ದೀರ್ಘವಾದ, ಎಲ್ಲ ವಿವರಗಳಿಂದ ಕೂಡಿದ ವರದಿಗಳನ್ನು ಈಗಾಗಲೇ ಇಟ್ಟಿದೆ......

ಶ್ರೀ ಎಸ್. ಶಿವಪ್ಪ.—ಸಭಾಪತಿಗಳೇ, ಮಾನ್ಯ ಸಚಿವರು ಈ ಮಸೂದೆಯನ್ನು ಸರಿಮಾಡಿ ತೆಗೆದುಕೊಂಡು ಬರಬೇಕು, ಇದು ದೇಶಕ್ಕೆ ಸಂಬಂಧಪಟ್ಟ ಮಹತ್ತರವಾದ ವಿಚಾರ ಎಂದು ಹೇಳಿದರೂ ಕೂಡ ಅವರು ನಮ್ಮ ಯಾವ ಆಕ್ಷೇಪಣೆಗಳಿಗೂ ಮನ್ನಣೆಯನ್ನು ಕೊಡದೆ ನಿರ್ಣಯವನ್ನು ಮಂಡನೆ ಮಾಡಿಯೇ ಮಾಡುತ್ತೇವೆ ಎನ್ನುವ ನಿಲುವನ್ನು ತೆಗೆದುಕೊಂಡಿದ್ದಾರೆ. ನಾವು ಆ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿ ಕೆಲವು ಕಾಲ ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸರ್ವೆ ಸೆಟಲ್‌ಮೆಂಟ್ ವಿಷಯಕ್ಕೆ ಮಾನ್ಯ ಸದಸ್ಯರು ತಮ್ಮ ವಿರೋಧವನ್ನು ಈ ರೀತಿ ವ್ಯಕ್ತಪಡಿಸದೆ ಅದನ್ನು ನೇರವಾಗಿ ಹೇಳಬಹುದಾಗಿತ್ತು. ಜನಗಳು ಸಾಮಾನ್ಯವಾಗಿ ಕಂದಾಯವನ್ನು ಹೆಚ್ಚು ಮಾಡುವುದನ್ನು ವಿರೋಧಿಸುತ್ತಾರೆ. ಏನೋ ಕಾರಣಗಳನ್ನು ತಂದು, 'ಚೀಪ್ ಪಾಪ್ಯುಲಾರಿಟಿ'ಯಿಂದ ಮಾನ್ಯ ಸದಸ್ಯರು ಮಾತನಾಡಿದ ಹಾಗೆ ಕಾಣುತ್ತದೆ. ಸರ್ವೆ ಸೆಟಲ್‌ಮೆಂಟ್ ರಿಪೋರ್ಟನ್ನು ಸಭೆಯ ಮುಂದೆ ಇಟ್ಟಿದೆ. ಕಂದಾಯ ಸರ್ಕಾರಕ್ಕೆ ಹೆಚ್ಚಾಗಿ ಬರಲೇಬೇಕು. ಆದರೆ ಎಷ್ಟು ಹೆಚ್ಚು ಮಾಡಬೇಕು, ಯಾವ ರೀತಿ ಮಾಡಬೇಕು ಎನ್ನುವುದನ್ನು ನೋಡಬೇಕು. ಖಂಡಿತವಾಗಿಯೂ ಕಂದಾಯವನ್ನು ಹೆಚ್ಚು ಮಾಡಲಾಗುವುದು. ಈಗಾಗಲೇ ರಾಜ್ಯದ ಅನೇಕ ಭಾಗಗಳಲ್ಲಿ ಕಂದಾಯ ನಿಷ್ಕರ್ಷೆಯಾಗಿ 50-60 ವರ್ಷವಾಗಿದೆ. ಒಂದು ಸಲ ಕಂದಾಯವನ್ನು ನಿಷ್ಕರ್ಷೆ ಮಾಡಿದರೆ ಅದಕ್ಕೆ 30 ವರ್ಷ ಗ್ಯಾರಂಟಿ ಕೊಡುತ್ತಾರೆ. ಆ ಅವಧಿ ಮುಗಿದು 10 ವರ್ಷ, 15 ವರ್ಷ, 20 ವರ್ಷ ಹೀಗೆ ಆಗಿದೆ. ಹೈದರಾಬಾದ್ ಕರ್ಣಾಟಕದ ನಾಲ್ಕು ತಾಲ್ಲೂಕುಗಳನ್ನು ಬಿಟ್ಟರೆ ಮಿಕ್ಕ ಎಲ್ಲ ಭಾಗಗಳಲ್ಲಿಯೂ ಕೂಡ ಬಹಳ ಹಿಂದೆಯೇ ರಿವಿಷನ್ ಸೆಟಲ್‌ಮೆಂಟ್ ಬರಬೇಕಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಅದರ ಅವಧಿ ಮುಗಿದು ಹೋಗುತ್ತದೆ. ಸಂಸ್ಥಾನದ ಇತರ ಎಲ್ಲ ಭಾಗಗಳಲ್ಲಿಯೂ ಕೂಡ 10-15 ವರ್ಷಗಳ ಹಿಂದೆಯೇ ಕಂದಾಯವನ್ನು ಏರಿಸಬೇಕಾಗಿತ್ತು. ಕಾರಣಾಂತರದಿಂದ ಮಾಡಲಿಲ್ಲ. ಈಗ ಸರ್ವೆ ಸೆಟಲ್‌ಮೆಂಟ್ ಕೆಲಸ ಪ್ರಾರಂಭವಾಗಿ 9 ವರ್ಷವಾಯಿತು. 9 ವರ್ಷದ ಹಿಂದೆ ಬೊಂಬಾಯಿ ಕರ್ಣಾಟಕದ ಭಾಗಗಳಲ್ಲಿ ಪ್ರಾರಂಭವಾದ ಮೇಲೆ ಕನ್ನಡ ದೇಶವಾಯಿತು. ಅಮೇಲೆ ಬೇರೆ ಭಾಗಗಳಲ್ಲಿ ಕೂಡ ಸರ್ವೆ ಸೆಟಲ್‌ಮೆಂಟ್ ಕೆಲಸ ಪ್ರಾರಂಭವಾಯಿತು. ಈ ಕೆಲಸಕ್ಕಾಗಿ ಮೈಸೂರು ರಾಜ್ಯವನ್ನು 38 ಜೋನುಗಳಾಗಿ ಮಾಡಿ ಅದನ್ನು ಪುನಃ ಒಟ್ಟು 130 ಗ್ರೂಪುಗಳಾಗಿ ಮಾಡಿ ಕಂದಾಯದ ರಿವಿಷನ್ ಸೆಟಲ್‌ಮೆಂಟ್ ಪ್ರಾರಂಭವಾಯಿತು. ಇದಕ್ಕೆ 9 ವರ್ಷ ತೆಗೆದುಕೊಂಡಿರುವುದನ್ನು ನೋಡಿದರೆ ಎಷ್ಟೊಂದು ವಿವರಗಳನ್ನು ಅಧಿಕಾರಿಗಳು ಗಮನಕೊಟ್ಟು ಸಂಗ್ರಹ ಮಾಡಿದ್ದಾರೆ, ಎಂದು ಅರ್ಥವಾಗುತ್ತದೆ. ಲ್ಯಾಂಡ್ ರೆವನ್ಯೂ ಆಕ್ಟ್‌ನಲ್ಲಿ ಏನೇನು ರಿವಿಷನ್ ಸೆಟಲ್‌ಮೆಂಟ್ ಮಾಡಲು ನಿಯಮಗಳಿವೆ ಆ ಪ್ರಕಾರ ಮಾಡಬೇಕಾಯಿತಾದ್ದರಿಂದಲೂ, ಒಂದು ಸಲ ಮಾಡಿದ ಮೇಲೆ ಅದರ ಪ್ರಕಾರ 30 ವರ್ಷ ಕಾಲ ರೈತರು ಕಂದಾಯವನ್ನು ಕೊಡಬೇಕಾಗುವುದರಿಂದಲೂ, ಅಧಿಕಾರಿಗಳು ಬಹಳ ನಿಧಾನವಾಗಿ, ಕೂಲಂಕಷವಾಗಿ ಎಲ್ಲ ವಿವರಗಳನ್ನೂ ಸಂಗ್ರಹಿಸಿ ಪರಿಶೀಲನೆ ಮಾಡಿದ್ದಾರೆ. ಪ್ರತಿಯೊಂದು ಜೋನಿನಲ್ಲಿ ಅಲ್ಲಿಯ ಭೂಮಿಯ ಗುಣ, ಹವಾಗುಣ, ಮಾರುಕಟ್ಟೆಯ ಅನುಕೂಲತೆಗಳು, ಜನಜೀವನದಲ್ಲಿ ಉಪಯೋಗಿಸುವ ಕೆಲವು ನಾಣ್ಣುಡಿಗಳು ಇವುಗಳನ್ನೆಲ್ಲ ಹೇಳಿದ್ದಾರೆ. ಅಧಿಕಾರಿಗಳು ಜನಗಳಲ್ಲಿ ಬೆರೆತು ಜನಜೀವನದ ವಿಷಯಗಳನ್ನೆಲ್ಲ ತಿಳಿದುಕೊಂಡು ಜನರು ಬಳಸುವ ಕೆಲವು ಗಾದೆಗಳನ್ನು ಕೂಡ ವರದಿಯಲ್ಲಿ ಬರೆಯಬೇಕಾದರೆ ಅವರನ್ನು ನಾವು ಅಭಿನಂದನೆ ಮಾಡಬೇಕು. ಇಷ್ಟೊಂದು ವಿವರವಾಗಿ ಅಭ್ಯಾಸ ಮಾಡಿ ಜನಗಳಿಗೆ ತೊಂದರೆಯಾಗಬಹುದು ಎನ್ನುವ ದೃಷ್ಟಿಯಿಂದ ಜನಗಳಲ್ಲಿ ಬೆರೆತು, ಅವರ ಪರಿಸ್ಥಿತಿಯನ್ನು ತಿಳಿದು

ದೀರ್ಘವಾದ ಸ್ಟೇಟ್‌ಮೆಂಟುಗಳನ್ನು ಪ್ರತಿಯೊಂದು ಜೋನಿಗೂ ತಯಾರು ಮಾಡಿದ್ದಾರೆ! ಪ್ರತಿಯೊಂದು ಜೋನ್ ಮಾಡುವಾಗಲೂ ಅನೇಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಮಾಡಿದ್ದಾರೆ! ಒಂದೊಂದು ಜೋನಿನಲ್ಲಿಯೂ ವ್ಯತ್ಯಾಸಗಳು ಬರಬಹುದೆಂದು ಆ ಜೋನುಗಳನ್ನು 130 ಗ್ರೂಪ್‌ಗಳಾಗಿ ವಿಂಗಡಿಸಿದರು. ಕೆಲವು ಕಡೆ ಎರಡು, ಮೂರು, ನಾಲ್ಕು, ಐದು ಹೀಗೆ ಅಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಗ್ರೂಪುಗಳಾಗಿ ವಿಂಗಡಿಸಿದರು.

Physical conflagration, climatic and rainfall condition yield of principal crops and their prices and communications; standard of husbandry, population and supply of labour, agricultural resources, variations in the area, etc. ಈ ಆಧಾರದ ಮೇಲೆ ಜೋನ್ ಮತ್ತು ಗ್ರೂಪ್‌ಗಳನ್ನು ಮಾಡಿದರು. ಏಕೆಂದರೆ, ಕೆಲವು ಪ್ರದೇಶಗಳಲ್ಲಿ ಹೆಚ್ಚಿಗೆ ವೇಜಸ್ ಕೊಡಬೇಕಾಗುತ್ತದೆ. ಅಗ್ರಿಕಲ್‌ಚರಲ್ ಲೇಬರರ್ಸ್‌ಗೆ ಸರಿಯಾದ ವೇಜಸ್ ಇಲ್ಲದಿದ್ದರೆ ಅವರು ಯಾರೂ ಕೆಲಸಕ್ಕೆ ಬರುವುದಕ್ಕೆ ತೊಂದರೆಯಾಗುತ್ತದೆ. ಎಲ್ಲಾ ಕಂಡೀಷನ್ಸ್‌ನ್ನು ಅವರು ತಿಳಿದುಕೊಂಡು, ಆಯಾ ಪ್ರದೇಶದ ಸ್ಥಿತಿಗತಿಗಳನ್ನು ಪರಿಶೀಲಿಸಿ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಮುಖ್ಯವಾಗಿ ಹಿಂದಿದ್ದ ಕಂದಾಯ ಜಾಸ್ತಿಯಾಗಬೇಕು. ಸರ್ಕಾರಕ್ಕೆ ಅನೂಚಾನವಾಗಿ ಬಂದಿರತಕ್ಕ ಹಕ್ಕು ಇದು. 30 ವರ್ಷಗಳಿಗೊಂದುಸಾರಿ ಪುನರ್ವಿಮರ್ಶಿಸಿ ಹಾಕತಕ್ಕ ತೆರಿಗೆ. ಹಿಂದೆ ಕನ್ನಡ ದೇಶದ ಅನೇಕ ಭಾಗಗಳಲ್ಲಿ ಈ ಬಗ್ಗೆ ಒಂದು ಯೂನಿಫಾರ್ಮಿಟಿ ತಂದಿದ್ದರು. ಆ ಪದ್ಧತಿ ಹಳೆಯ ಮೈಸೂರಿನಲ್ಲಿಯೂ ಇತ್ತು. ಕೋಲಾರದ ಜಿಲ್ಲೆಯ ರೈತರು ಈ ಪದ್ಧತಿಯನ್ನು ಅನುಸರಿಸುವುದಕ್ಕೆ ಸ್ವಲ್ಪ ಅಸಮಾಧಾನಪಟ್ಟರು. 80-90 ವರ್ಷಗಳ ಹಿಂದೆ ಈ ದೇಶದಲ್ಲಿ ಮಹಾರಾಷ್ಟ್ರದವರು ಬಂದಿದ್ದಾಗ ಅವರಿಂದ ಈ ಪದ್ಧತಿ ಬಂತು. ಕೋಲಾರಕ್ಕೆ ಈ ಪದ್ಧತಿಯನ್ನು ಜಾರಿಗೆ ತಂದಾಗ ಅಲ್ಲಿನವರು ಕಂದಾಯವನ್ನು ಕೊಟ್ಟಿಲ್ಲ. ಅವರಿಗೆ ಕೋಪ ಬಂದು ತೆರಿಗೆಯನ್ನು ಜಾಸ್ತಿ ಹಾಕಿದರು, ಎಂದು ಹೇಳುತ್ತಿದ್ದರು. ಏಕೆಂದರೆ, ಆಗ ಕೋಲಾರದವರಿಗೆ ಕೊಡಬೇಕಾದ ಗಮನವನ್ನು ಸರಿಯಾಗಿ ಕೊಟ್ಟಿಲ್ಲ, ಅದನ್ನು ಕೋಲಾರದವರು ಇವತ್ತೂ ಮಾತನಾಡುತ್ತಿದ್ದಾರೆ. ಹಿಂದಿನ ಸರ್ವೆ ಸೆಟಲ್‌ಮೆಂಟಿನ ಪದ್ಧತಿಯಲ್ಲಿ ಅವರಿಗಂತೂ ಬಹಳ ಕೋಪವಿತ್ತು. ಅದಕ್ಕಾಗಿ ಆಗಿನಿಂದಲೇ ಒಂದು ಶಾಸ್ತ್ರೀಯವಾದ ಒಂದು ತೀರ್ಮಾನ ಮಾಡಬೇಕಾಯಿತು.

ರೈತನಾದವನು 16 ಆಣೆ ಬೆಳೆದರೆ 1 ಆಣೆ ಸರ್ಕಾರಕ್ಕೆ ಕಂದಾಯರೂಪವಾಗಿ ಕೊಡಬೇಕೆಂಬುದಾಗಿ ನಿರ್ಧರವಾಯಿತು. ಒಂದು ಎಕರೆಯಲ್ಲಿ 2 ರೂಪಾಯಿ ಬೆಳೆ ಬೆಳೆದರೆ ಎರಡಾಣೆ ಕೊಡಬೇಕು, ಒಂದು ರೂಪಾಯಿ ಬೆಳೆದರೆ ಒಂದಾಣೆಕೊಡಬೇಕು, 100 ರೂಪಾಯಿ ಬೆಳೆ ಬೆಳೆದರೆ 100 ಆಣೆ ಕೊಡಬೇಕು, ಒಂದು ರೂಪಾಯಿಗೆ ಒಂದಾಣೆಯಂತೆ ಶೇಕಡ 6¼ ರಷ್ಟು ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕು. ಗ್ರಾಸ್ ಪ್ರೊಡ್ಯೂಸ್‌ನಲ್ಲಿ ಈ ರೀತಿ ಕೊಡಬೇಕೆಂಬುದಾಗಿ ತೀರ್ಮಾನವಾಗಿದೆ. ಒಂದು ಭೂಮಿಯಲ್ಲಿ ಸೇಂಗಾ ಬೆಳೆದರೆ ಉತ್ಪತ್ತಿ ಜಾಸ್ತಿ ಬಂದರೆ ಈ ರೀತಿ ಕಂದಾಯ ಕೊಡಬೇಕು, ಆದರೆ ಅದೇ ಭೂಮಿಯಲ್ಲಿ ಮತ್ತೆ ಬತ್ತ ಬೆಳೆದರೆ ಆಗ ಕಡಿಮೆ ತೆರಿಗೆ ಕೊಡುವುದಾಗಿಯೂ ತೀರ್ಮಾನ ಮಾಡಲಾಗಿದೆ. ಗ್ರಾಸ್ ಪ್ರೊಡ್ಯೂಸ್‌ನಲ್ಲಿ ಈಲ್ಡ್ ಮತ್ತು ಪ್ರೈಸ್—ಈ ಎರಡು ವಿಷಯಗಳು ಬಹಳ ಪ್ರಾಧಾನ್ಯವಾದುವುಗಳು. ಒಂದು ಪ್ರದೇಶದಲ್ಲಿ ಒಂದು ಎಕರೆ ಭೂಮಿಯಲ್ಲಿ ಹತ್ತಿ ಬೆಳೆಯುತ್ತಾರೆನ್ನೋಣ. ಆ ಪ್ರದೇಶದಲ್ಲಿ ಆಗಿರತಕ್ಕ ಈಲ್ಡ್ ಕೇವಲ 150 ಅಥವಾ 200 ಪೌಂಡುಗಳು ಎಂದರೆ, ಅದನ್ನು ಯಾವ ಬೆಲೆಗೆ ಮಾರಾಟಮಾಡಬೇಕು ಎಂಬುದೂ ಸಹ ಮುಖ್ಯವಾದುದು. ಅದರ ಉತ್ಪತ್ತಿ ಮತ್ತು ಅದರ ಬೆಲೆಗಳ ನಿರ್ಧಾರದ ಮೇಲೆ ಅದನ್ನು ನಿಗದಿ ಮಾಡಬೇಕು. 16 ಆಣೆಯಲ್ಲಿ ಒಂದಾಣೆ ಕಂದಾಯ ಎಂಬುದಾಗಿಯೇ ಈಗ ನಿರ್ಧಾರ ಮಾಡಿದೆ. ಈಲ್ಡ್ ಮತ್ತು ವ್ಯಾಲ್ಯುಗಳನ್ನು ತೆಗೆದುಕೊಳ್ಳಬೇಕಾದರೆ ಯಾವ ವರ್ಷದಿಂದ ತೆಗೆದುಕೊಳ್ಳಬೇಕೆಂಬುದು ಮುಖ್ಯವಾದುದು. ಈ ಆಕ್ಟ್‌ನಲ್ಲಿ ಹೇಳಿರುವ ಹಾಗೆ ನೋಡಿದರೆ, ಯಾವ ವರ್ಷವಾದರೂ ತೆಗೆದುಕೊಳ್ಳಬಹುದು. ಮುಂದೆ ಬರತಕ್ಕ ವರ್ಷಗಳ ಬೆಳೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ, ಇವತ್ತು ತೀರ್ಮಾನಮಾಡುವ ಕಂದಾಯ ಇನ್ನು 30 ವರ್ಷಗಳಾದರೂ ಅದೇ ಇರಬೇಕಾಗುತ್ತದೆ. ಕಾನೂನು ಪ್ರಕಾರ ಮುಂದೆ ಕೊಡುವ ಕಂದಾಯವನ್ನು ತೀರ್ಮಾನಮಾಡುತ್ತಿರುವಾಗ ಇವತ್ತಿನ ಬೆಲೆಯಲ್ಲಿ 16 ಆಣೆಯಲ್ಲಿ ಒಂದಾಣೆ ಭಾಗ ಮಾಡಿದರೆ ಏನು ತೊಂದರೆಯಾಗುತ್ತದೆಂಬುದನ್ನು ವಿಚಾರಮಾಡುವುದಾಗಿದೆ. ಈಗೇನೋ ಬಹಳ ಬೆಲೆಗಳು ಇವೆ. ಎರಡು-ಮೂರು ವರ್ಷಗಳಿಂದ ಬಹಳ ಬೆಲೆಗಳು ಪದಾರ್ಥಗಳಿಗೆ ಆಗಿರುವುದರಿಂದ ಈ ಎರಡು ವರ್ಷಗಳನ್ನು ಬಿಟ್ಟು ಹಿಂದಿನ 55-56-57-58-59—ಈ ಐದು ವರ್ಷಗಳಲ್ಲಿದ್ದಂಥ ಬೆಲೆಗಳನ್ನು ತೆಗೆದುಕೊಂಡು ಕಂದಾಯವನ್ನು ವಿಮರ್ಶೆ ಮಾಡಬೇಕಾಗಿದೆ. ಆ ಪ್ರಕಾರ ಈ ಐದು ವರ್ಷಗಳಲ್ಲಿದ್ದಂಥ ಈಲ್ಡ್ ಮತ್ತು ಪ್ರೈಸ್‌ಗಳನ್ನು ಗಣನೆಗೆ ತೆಗೆದುಕೊಂಡು, ಲೆಖ್ಖಾಚಾರಮಾಡಿ ಒಂದು

(ಶ್ರೀ ಎಂ. ಎ. ಕೃಷ್ಣಪ್ಪ)

ಸ್ಟ್ಯಾಂಡರ್ಡ್ ರೇಟನ್ನು ಈಗ ನಿಗದಿಮಾಡಿದ್ದಾರೆ. ಹಿಂದೆ ಮಾಡಿದ ಹಾಗೆ ಯಾವ ಬೇಸಿಸ್ ಇಲ್ಲದೆ ಈಗ ಮಾಡಿಲ್ಲ. ಈ ರೀತಿ ಕಂದಾಯವನ್ನು 1 ರೂಪಾಯಿಗೆ 1 ಆಣೆ ಭಾಗವೆಂದು ಇತ್ಯರ್ಥ ಮಾಡಿರುವುದರಿಂದ ಯಾರಿಗೂ ಇದರಲ್ಲಿ ಅನ್ಯಾಯವಾಗುವುದಕ್ಕೆ ಕಾರಣವಿಲ್ಲ. ಏಕೆಂದರೆ, ಹಿಂದಿನ ಐದು ವರ್ಷಗಳ ಈಲ್ಡ್ ಮತ್ತು ಅಂಕಿ ಅಂಶಗಳನ್ನು ಶೇಖರಿಸಿ ನಿರ್ಧಾರ ಮಾಡಲಾಗಿದೆ. ಯಾವ ಅಂಕಿ ಅಂಶಗಳನ್ನೇ ಆಗಲೀ ಕೇಂದ್ರಸರ್ಕಾರಕ್ಕೆ ರಾಜ್ಯಸರ್ಕಾರದವರೇ ಸಪ್ಲೈಮಾಡುತ್ತಾರೆ. ನಮ್ಮ ಸಂಸ್ಥಾನ ಸರ್ಕಾರ ಇಂತಿಂಥ ಸ್ಥಳಗಳಲ್ಲಿ ಇಷ್ಟಿಷ್ಟು ಬೆಳೆ ಬೆಳೆದಿದೆ, ಇಷ್ಟಿಷ್ಟು ಈಲ್ಡ್ ಬಂದಿದೆ ಎಂಬ ಬಗ್ಗೆ ಎಲ್ಲಾ ಅಂಕಿ ಅಂಶಗಳನ್ನು ರಾಜ್ಯಸರ್ಕಾರದವರು ಶೇಕರವಾಡಿ ಕೊಟ್ಟರೆ 40-50 ವರ್ಷಗಳ ಹಿಂದೆ ಇದ್ದಂಥ ಕಂದಾಯವನ್ನು ನಿಷ್ಕರ್ಷೆ ಮಾಡುವುದರ ಮೂಲಕ ಕೇಂದ್ರ ಸರ್ಕಾರದ ವರು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್ ಮುಖಾಂತರ ನ್ಯಾಷನಲ್ ಸ್ಯಾಂಪಲ್ ಸರ್ವೆ ಮಾಡುತ್ತಾರೆ. ಕ್ರಾಪ್‌ಕಟಿಂಗ್ಸ್‌ನಲ್ಲಿ ಏನೇನು ಮೆತಡ್ಸ್ ಇರುತ್ತದೆಯೋ ಅವನ್ನೆಲ್ಲಾ ಪರಿಶೀಲಿಸುತ್ತಾರೆ. ಫೈನಲ್ಲಾಗಿ ಒಂದು ಎಕರೆಗೆ ಎಷ್ಟು ಬೆಳೆಯಾಗುತ್ತದೆಂಬುದನ್ನು ಅಂಕಿ ಅಂಶ ಗಳಿಂದ ಜಡ್ಜ್ ಮಾಡುತ್ತಾರೆ. ಪ್ರತಿಯೊಂದು ಜೋನಿನಲ್ಲಿ ಎಷ್ಟು ಈಲ್ಡ್ ಬರುತ್ತದೆ ಎಂಬ ಬಗ್ಗೆ ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನವರು ಒಂದು ಸ್ಯಾಂಪಲ್ ಸರ್ವೆಮಾಡಿ ಒಂದು ಅಕ್ಯುರೇಟ್ ಫಿಗರನ್ನು ಕೊಡುತ್ತಾರ. ಆದರೆ ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನವರು ಪ್ರತಿಯೊಂದು ಹಳ್ಳಿ ಯಲ್ಲೂ ಬಂದು ನೋಡುವುದಿಲ್ಲ. ಟೋಟಲ್ ಫಿಗರ್ಸ್‌ನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಕೊಂಚ ವಾದರೂ ಅಕ್ಯುರೇಟ್ ಇರುತ್ತದೆ. ಹಿಂದೆ 50 ವರ್ಷಗಳಲ್ಲಿ ಲೆಖ್ಖಗಳನ್ನು ಶ್ಯಾನುಬೋಗರು ಬರೆಯುತ್ತಿದ್ದುದಕ್ಕಿಂತ ಈಗಿನ ಪದ್ಧತಿ ಹೈಲ ಡಿಪೆಂಡಬಲ್, ಇಷ್ಟು ಈಲ್ಡ್ ವಿಚಾರವಾಯಿತು.

ಇನ್ನು ಪ್ರೈಸಸ್ ವಿಚಾರ. 50 ವರ್ಷಗಳ ಹಿಂದೆ ರೆವಿನ್ಯೂ ಅಧಿಕಾರಿಗಳು ಕಂದಾಯವನ್ನು ನಿಗದಿಮಾಡಬೇಕಾದರೆ ಯಾವ ರೀತಿ ಬೆಲೆಗಳನ್ನು ನಿರ್ಧಾರ ಮಾಡುತ್ತಿದ್ದರೆಂದರೆ ವರ್ತಕರು ಅಥವಾ ಜನರು ಹೇಳಿದ ಬೆಲೆಗಳನ್ನು ಕೇಳಿ ಅವರಂತೆಯೇ ಬರೆಯುತ್ತಿದ್ದರು. ಆದರೆ ಈಗ ಪ್ರತಿಯೊಂದು ಪದಾರ್ಥಕ್ಕೂ ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಅಲ್ಲಿಗೆ ಬಂದಂಥ ಪದಾರ್ಥಗಳನ್ನು ಹರಾಜು ಮಾಡುತ್ತಾರೆ. ಹರಾಜಿನಲ್ಲಿ ಯಾವ ಬೆಲೆಗೆ ಮಾರಾಟವಾಯಿತು ಎಂಬ ಬಗ್ಗೆ ಖಚಿತವಾದ ಅಂಕಿ ಅಂಶಗಳು ವರದಿಯಾಗುತ್ತವೆ. ಅವನ್ನು ಆಧಾರವಾಗಿಟ್ಟುಕೊಂಡು ಈಗ ಬೆಲೆಗಳನ್ನು ನಿಗದಿ ಮಾಡುತ್ತಾರೆ. ಆದ್ದರಿಂದ 50 ವರ್ಷಗಳ ಹಿಂದೆ ಶ್ಯಾನುಭೋಗರು, ಅಮಲ್ದಾರರು ಮತ್ತು ಇತರ ರೆವಿನ್ಯೂ ಅಧಿಕಾರಿಗಳು ಹೋಗಿ ಬೆಲೆ ತಿಳಿದುಕೊಂಡು ಅದನ್ನು ಚೆಕ್‌ಮಾಡಿ ಕಂದಾಯ ನಿಗದಿ ಮಾಡುವ ಪದ್ಧತಿಗಿಂತಲೂ ಈಗ ಖಚಿತವಾದ ಅಂಕಿ ಅಂಶಗಳ ಆಧಾರದ ಮೇಲೆ ಗೊತ್ತುಮಾಡುವ ಕಂದಾಯ ಶ್ರೇಷ್ಠವಾದ ಪದ್ಧತಿ.

ಈ ಎರಡು ವಿಷಯದಲ್ಲಿ ಯಾವವಿವಾದವೂ ಇಲ್ಲ. ಈಗ ನಾವು ಮಾಡಿರತಕ್ಕ ವಿಧಾನ ಬಹಳ ಚೆನ್ನಾಗಿದೆ. ನಾನು ಚೈನಾ, ರಷ್ಯಾ ಮುಂತಾದ ಅನೇಕ ದೇಶಗಳನ್ನು ನೋಡಿದ್ದೇನೆ. ಅಲ್ಲಿರುವುದ ಕ್ಕಿಂತಲೂ ಇಲ್ಲಿ ಉತ್ತಮವಾದ ರೀತಿಯಲ್ಲಿ ನಾವು ಈ ಒಂದು ಸಿಸ್ಟಮ್ ಅನ್ನು ಮಾಡಿದ್ದೇವೆ. ಒಳ್ಳೆಯ ಸರಿಯಾದ ಏಜೆನ್ಸೀಸ್ ಕೊಟ್ಟ ಅಂಕಿ ಅಂಶಗಳ ಆಧಾರದ ಮೇಲೆ ಈಲ್ಡ್ ಪ್ರೈಸಸ್ ತೆಗೆದು ಕೊಂಡು ಅದರ ಮೇಲೆ ಆವರೇಜ್ ಸ್ಟ್ಯಾಂಡರ್ಡ್ ರೇಟ್ ಫಿಕ್ಸ್ ಮಾಡಿದ್ದೇವೆ. ಇದರ ಡೀಟೇಲ್ಸ್ ಬೇಕಾದರೆ ಈ ಮಾನ್ಯ ಸಭೆಗೆ ಹೇಳುತ್ತೇನೆ. ಈಗ ಇದರಲ್ಲಿ ಹಾಕಿರತಕ್ಕಂಥಾದ್ದು 16 ಆಣೆಗೆ ಒಂದಾಣೆ ಕಂದಾಯ. ಸಾಮಾನ್ಯವಾಗಿ ಮೈಸೂರುದೇಶದಲ್ಲಿ 3¼ ಕೋಟಿ ರೂಪಾಯಿಗಳು ಭೂಕಂದಾಯದ ರೂಪದಲ್ಲಿ ಬರುತ್ತದೆ. ಸುಮಾರು 125 ಕೋಟಿ ರೂಪಾಯಿಗಳನ್ನು ಜನಗಳ ಗೋಸ್ಕರವಾಗಿಯೇ ನಾವು ಖರ್ಚುಮಾಡುತ್ತಿದ್ದೇವೆ. ಈಗ ಇರತಕ್ಕಂಥ ಕಂದಾಯ 100ಕ್ಕೆ 90 ಭಾಗ ಬಹಳ ಹಿಂದೆ ಒಡೇರರಾಯನ ಕಾಲದ ರೀತಿಯಲ್ಲಿ ಹಾಕಿದ ಕಂದಾಯ. ಈಗ 60-70 ವರ್ಷ ಗಳ ಹಿಂದೆ ನಮ್ಮ ರಾಜ್ಯದ ಬಡ್ಜೆಟ್ 2½ ಕೋಟಿ 3 ಕೋಟಿ ರೂಪಾಯಿಗಳಿತ್ತು. ನಾನು ಅಸೆಂಬ್ಲಿ ಸದಸ್ಯನಾಗಿದ್ದಾಗ ಶ್ರೀಮಾನ್ ಶಿವಪ್ಪನವರೂ ಅಸೆಂಬ್ಲಿ ಸದಸ್ಯರಾಗಿ ಬಂದರು. ನಾನು ಉದ್ಧಕ್ಕೂ ಕೆಲವು ವರ್ಷಗಳು ಅಸೆಂಬ್ಲಿ ಸದಸ್ಯನಾಗಿದ್ದೆ. 1944 ನೇ ಇಸವಿಯಲ್ಲಿ ನಮ್ಮ ಮೈಸೂರು ದೇಶದ ಬಡ್ಜೆಟ್ 2 ಕೋಟಿ ರೂಪಾಯಿಗಳಿತ್ತು. 20 ವರ್ಷಗಳ ಹಿಂದೆ 5 ಕೋಟಿ ರೂಪಾಯಿಗಳ ಬಡ್ಜೆಟ್ ಇದ್ದಾಗ 2½ ಕೋಟಿ ರೂಪಾಯಿ ಕಂದಾಯ ಬರುವುದು ದೊಡ್ಡದಾಗಿತ್ತು. ಆಗ ಮೈಸೂರಿನ ಬಡ್ಜೆಟ್ಟಿನ ಅರ್ಧಭಾಗ ಬರೀ ಕಂದಾಯದ ರೂಪದಲ್ಲಿಯೇ ಬರುತ್ತಿತ್ತು. ಆಗ ರೈತರು ಭೇಷ್ ಎಂದು ಹೇಳುತ್ತಿದ್ದರು. ಈಗ 3¼ ಕೋಟಿ ರೂಪಾಯಿಗಳು ಕಂದಾಯದಿಂದ ಬರುತ್ತದೆ. ಸರ್ಕಾರ ದವರು ಜನತೆಗೋಸ್ಕರ 125 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಈಗ ಇರು ವಂತಹ ಕಂದಾಯವನ್ನು ರಿವಿಜನ್ ಸೆಟ್ಲ್‌ಮೆಂಟ್ ಪ್ರಕಾರ ಡಬಲ್ ಮಾಡಿದರೂ ಅದರಿಂದ 7 ಕೋಟಿ

ರೂಪಾಯಿಗಳು ಬರುತ್ತವೆ ಅಷ್ಟೆ. ಜನಗಳ ಹಿತದೃಷ್ಟಿಯಿಂದ ಸರ್ಕಾರದವರು 125 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಈಗ ಮಾಡತಕ್ಕಂಥ ಕಂದಾಯದ ಏರಿಕೆ ರೈತರಿಗೆ ಅಷ್ಟೇನೂ ದೊಡ್ಡದಾಗುವುದಿಲ್ಲ. ಈ ಕಂದಾಯವನ್ನು ಹೆಚ್ಚು ಮಾಡುವುದರಿಂದ ರೈತನಿಗೆ ದ್ರೋಹ ಮಾಡಿದಂತಾಗುತ್ತದೆ ಎಂದು ವಿರೋಧ ಪಕ್ಷದವರು ಅದನ್ನು ವಿರೋಧ ಮಾಡಿದರೂ ಕೂಡ ಈ ಕಂದಾಯದ ಏರಿಕೆಯಿಂದ ಬರತಕ್ಕ 7 ಕೋಟಿ ರೂಪಾಯಿಗಳಲ್ಲಿ 100 ಕ್ಕೆ 77½ ಯಷ್ಟು ಭಾಗವನ್ನು ಹಳ್ಳಿಯಲ್ಲಿಯೇ ಬಿಡುತ್ತೇವೆ. ಈ ವಿಷಯವನ್ನು ಮಾನ್ಯ ಸದಸ್ಯರು ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಬೇಕು. ಈಗ 3½ ಕೋಟಿ ರೂಪಾಯಿ ಕಂದಾಯದ ರೂಪದಲ್ಲಿ ಬರುತ್ತಿದೆ ಈಗ ರಿವಿಜನ್ ಆಫ್ ಸೆಟ್ಲ್‌ಮೆಂಟ್ ಪ್ರಕಾರ ಇದನ್ನು ಡಬ್ಬಲ್ ಮಾಡಿದರೆ 7 ಕೋಟಿ ರೂಪಾಯಿಗಳು ಬಂದರೂ ಕೂಡ ಅದರಲ್ಲಿ 30 ಪರ್ಸೆಂಟ್ ಅನ್ನು ಪಂಚಾಯಿತಿಗಳಿಗೂ ಶೇಕಡ 30 ರಷ್ಟನ್ನು ತಾಲ್ಲೂಕು ಬೋರ್ಡುಗಳಿಗೂ ಶೇಕಡಾ 10ರಷ್ಟನ್ನು ಜಿಲ್ಲಾಪರಿಷತ್ತಿಗೂ ಮತ್ತು ಚೆನ್ನಾಗಿ ಕೆಲಸ ಮಾಡಿದ ಸಂಸ್ಥೆಗಳ ಪ್ರೋತ್ಸಾಹ ಕೊಡುವುದಕ್ಕೋಸ್ಕರವಾಗಿ ಅವುಗಳಿಗೆ 7½ ಪರ್ಸೆಂಟ್ ಕೊಡಬೇಕೆಂದು ಮಾಡಿದೆ. ಈ ರೀತಿಯಾಗಿ ಭೂಕಂದಾಯದ ಶೇಕಡ 77½ ರಷ್ಟು ಭಾಗವನ್ನು ಗ್ರಾಮಗಳ ಅಭಿವೃದ್ಧಿಗಾಗಿಯೇ ಖರ್ಚುಮಾಡಲಾಗುವುದು. ಈ ರೀತಿ ನಾವು ಕಂದಾಯವನ್ನು ಜಾಸ್ತಿ ಮಾಡಿದರೂ ಜನ ಏನು ತಿಳಿದುಕೊಳ್ಳುತ್ತಾರೆ ಎಂದರೆ ಈ ಕಂದಾಯದ ಹಣವನ್ನು ನಮ್ಮ ಊರುಗಳಿಗೇ ರಸ್ತೆಗಳನ್ನು ಮಾಡುವುದಕ್ಕೆ, ಸ್ಕೂಲುಗಳಿಗೆ ಮತ್ತು ಬಾವಿಗಳಿಗೆ ಖರ್ಚು ಮಾಡುತ್ತಾರೆಂದು ಜನಗಳು ಅರ್ಥಮಾಡಿಕೊಳ್ಳುತ್ತಾರೆ. ಈಗ ಜನಗಳಿಗೆ ತಿಳುವಳಿಕೆ ಬಂದಿದೆ. ಜನ ನಮಗೇ ವೋಟು ಕೊಡುತ್ತಾರೆ. ಈ ಹೊಸ ಪದ್ಧತಿಯು ಕಂದಾಯ ಜಾರಿಗೆ ಬರುವುದರಿಂದ ನಮ್ಮಲ್ಲಿ ಅನೇಕರಿಗೆ ಅನುಕೂಲವಾಗುತ್ತದೆ. ಸ್ಕೇರ್ಸಿಟಿ ಏರಿಯಾದಲ್ಲಿರುವವರಿಗೆ ಬಹಳ ಅನುಕೂಲವಾಗುತ್ತದೆ. ಈ ಸೆಟ್ಲ್‌ಮೆಂಟ್ ರಿವಿಜನ್‌ನಿಂದ ಯಾವ ಯಾವ ಜಿಲ್ಲೆಯಲ್ಲಿ ಸರಿಯಾಗಿ ಮಳೆ ಬೆಳೆ ಸರಿಯಾಗಿ ಆಗುವುದಿಲ್ಲವೋ ಮತ್ತು 3 ವರ್ಷಗಳಿಗೊಂದುಸಾರಿ ಬೆಳೆ ಆಗುತ್ತದೆಯೋ ಅಂಥಾ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಬಿಜಾಪುರ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಮುಂತಾದ ಸ್ಕೇರ್ಸಿಟಿ ಪರಿಸ್ಥಿತಿ ಇರುವಂತಹ ಪ್ರದೇಶಗಳಿಗೆ ಈ ರಿವಿಜನ್ ಸೆಟ್ಲ್‌ಮೆಂಟಿನಿಂದ ಅನುಕೂಲವಾಗುತ್ತದೆ. ಈಗ ಇದರಿಂದ ಅಣೆವಾರು ಪದ್ಧತಿಯು ಜಾರಿಗೆ ಬರುತ್ತದೆ. ಇದುವರೆಗೂ ಇದು ಬೊಂಬಾಯಿ ಕರ್ನಾಟಕದಲ್ಲಿ ಮಾತ್ರ ಜಾರಿಯಲ್ಲಿತ್ತು, ಹಳೆಯ ಮೈಸೂರಿನಲ್ಲಿ ಒಂದು ವೇಳೆ ಮಳೆಯ ಅಭಾವ ಉಂಟಾಗಿದ್ದರೂ ಖುಷ್ಕಿ ಜಮೀನುಗಳಿಗೆ ಪೂರ್ತಿ ಕಂದಾಯವನ್ನು ಕೊಡಬೇಕಾಗಿತ್ತು ಅವರಿಗೆ ಕಂದಾಯ ರಿಮಿಷನ್ ಮಾಡುತ್ತಿರಲಿಲ್ಲ. ಮಳೆ ಬರಲಿ ಮಳೆ ಬಾರದೆ ಇರಲಿ ಸ್ಕೇರ್ಸಿಟಿ ಏರಿಯಾದವರು ಕಂದಾಯವನ್ನು ಕೊಡಬೇಕಾಗಿತ್ತು. ತರೀ ಬೆಳೆ ಆಗಿಲ್ಲ ಎಂದು ಪ್ರೂವ್ ಆದರೆ 50 ಪರ್ಸೆಂಟ್ ಕಂದಾಯವನ್ನು ರಿಮಿಷನ್ ಕೊಡುತ್ತಿದ್ದರು. ಈ ಆಣೆವಾರಿ ಪದ್ಧತಿ ಜಾರಿಗೆ ಬಂದಮೇಲೆ ನಾಲ್ಕಾಣೆ ಬೆಳೆ ಆದರೆ ಕಂದಾಯ ಪೂರ್ತಿ ಸಸ್ಪೆಂಡ್ ಆಗುತ್ತದೆ. 6 ಆಣೆ ಬೆಳೆ ಆದರೆ ಅರ್ಧ ಕಂದಾಯ ಸಸ್ಪೆಂಡ್ ಆಗುತ್ತದೆ. ಮೂರು ವರ್ಷ ಕಂದಾಯ ಸಸ್ಪೆಂಡ್ ಆದರೆ ಪೂರ್ತಿ ಕಂದಾಯವನ್ನು ಕೊಡಬೇಕಾದ್ದಿಲ್ಲ. ಈ ಪದ್ಧತಿ ನಮ್ಮ ಹಳೆಯ ಮೈಸೂರಿನಲ್ಲಿ ಇರಲಿಲ್ಲ. 4 ಆಣೆ 6 ಆಣೆ ಬೆಳೆ ಆದರೆ ವಿಲೇಜ್ ಯೂನಿಟ್ ತೆಗೆದುಕೊಳ್ಳುತ್ತಾರೆ. 4 ಆಣೆ ಬೆಳೆ ಆದರೆ ಕಂದಾಯದಲ್ಲಿ ರಿಯಾಯಿತಿ ಸಿಕ್ಕುತ್ತದೆ, 6 ಆಣೆಗಿಂತ ಕಡಿಮೆ ಬೆಳೆ ಆದರೆ ಕಂದಾಯ ಅರ್ಧ ರಿಯಾಯಿತಿ ದೊರೆಯುತ್ತದೆ. ಇದರಿಂದ ಸ್ಕೇರ್ಸಿಟಿ ಪ್ರದೇಶಗಳಾದ ಬಿಜಾಪುರ, ತುಮಕೂರು, ಕೋಲಾರ ಚಿತ್ರದುರ್ಗ ಈ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಆಮೇಲೆ ಮಂಡ್ಯಾ ಜಿಲ್ಲೆಯಲ್ಲಿ ನಾಗಮಂಗಲ, ಕೃಷ್ಣರಾಜನಗರ ಮುಂತಾದ ನಾಲ್ಕು ತಾಲ್ಲೂಕುಗಳಲ್ಲಿ ಮಳೆ ಸರಿಯಾಗಿ ಆಗುವುದಿಲ್ಲ. ಮೈಸೂರು ಜಿಲ್ಲೆಯಲ್ಲಿ 4-5 ತಾಲ್ಲೂಕುಗಳಲ್ಲಿ ಮತ್ತು ಹಾಸನ ಜಿಲ್ಲೆಯಲ್ಲಿ ಚನ್ನರಾಯಪಟ್ಟಣ ಮುಂತಾದ ಕೆಲವು ಭಾಗದಲ್ಲಿ ಇದೇ ಪರಿಸ್ಥಿತಿ ಇರುತ್ತದೆ. ಆಮೇಲೆ ಕಡೂರು ಜಿಲ್ಲೆಯ ಕೆಲವು ಭಾಗದಲ್ಲಿಯೂ ಕೂಡ ಅಭಾವ ಪರಿಸ್ಥಿತಿ ಇರುತ್ತದೆ. ಈ ಎಲ್ಲಾ ಪ್ರದೇಶಗಳಲ್ಲಿಯೂ ಇದುವರೆಗೆ ಆಣೆವಾರು ಸಿಸ್ಟಂ ಇರಲಿಲ್ಲ. ಈಗ ಈ ಪದ್ಧತಿಯು ಜಾರಿಗೆ ಬರುವುದರಿಂದ ಆ ಪ್ರದೇಶಗಳವರಿಗೆ ಕಂದಾಯದ ರಿಮಿಷನ್ ಸಿಕ್ಕುತ್ತದೆ.

ಈಗ ಒಟ್ಟಿನಲ್ಲಿ ಈ ರಿವಿಜನ್ ಸೆಟಲ್‌ಮೆಂಟ್ ಆದಮೇಲೆ ತಮಗೆ ರೇಟುಗಳನ್ನು ಹೇಳಿಬಿಡುತ್ತೇನೆ. 38 ಜೋನುಗಳಲ್ಲಿಯೂ ಕೂಡ ಫಿಕ್ಸ್ ಮಾಡಿರುವ ಸ್ಟ್ಯಾಂಡರ್ಡ್ ರೇಟನ್ನು ಹೇಳಿಬಿಡುತ್ತೇನೆ. ಅನೇಕರಿಗೆ ಸ್ಟ್ಯಾಂಡರ್ಡ್ ರೇಟು ಅರ್ಥವಾಗಿಲ್ಲ. ನನಗೂ ಅರ್ಥವಾಗುತ್ತಾ ಇರಲಿಲ್ಲ. ನಮ್ಮ ಆಫೀಸರುಗಳ ಹತ್ತಿರ ಡಿಸ್ಕಸ್ ಮಾಡಿದ ಮೇಲೆ ಸ್ವಲ್ಪ ಸ್ವಲ್ಪ ಅರ್ಥವಾಯಿತು. ಈಗ ಪೂರ್ತಿ ಅರ್ಥ ಮಾಡಿಕೊಂಡಿದ್ದೇನೆ. ಎರಡು ರೂಪಾಯಿ ಇದ್ದದ್ದು 8 ರೂಪಾಯಿ ಮಾಡಿಬಿಟ್ಟರು ಎಂದು ಹೇಳಿದರು. ಸ್ಟ್ಯಾಂಡರ್ಡ್ ರೇಟು ಅನೌನ್ಸ್ ಮಾಡಿರುವುದು ಇಂಡಿವಿಜುಯಲ್ ಸರ್ವೆ ನಂಬರುಗಳ ಮೇಲಲ್ಲ, ವಿಲೇಜುಗಳೂ ಅಲ್ಲ. ನಾವು ಅನೌನ್ಸು ಮಾಡಿರುವುದು ಜೋನುಗಳ

(ಶ್ರೀ ಎಂ. ವಿ. ಕೃಷ್ಣಪ್ಪ.)

ಮೇಲೆ. 16 ಆಣೆ ಬೆಳೆ ಬೆಳೆಯುವ ಫರ್ಟಿಲಿಟಿ ಕ್ಲಾಸಿಫಿಕೇಷನ್ ಇವಕ್ಕೆ ಅಪ್ಲೈ ಆಗುತ್ತದೆ. ಆದರೆ ನಮ್ಮ ಮೈಸೂರು ದೇಶದಲ್ಲಿ 16 ಆಣೆ ಬೆಳೆ ಕೊಡುವ ಫರ್ಟಿಲಿಟಿ ಸಾಯಿಲ್ ಇಲ್ಲವೇ ಇಲ್ಲ. ಸ್ಟ್ಯಾಂಡರ್ಡ್ ರೇಟು 2 ರೂಪಾಯಿ ಇದ್ದರೆ 4 ಆಣೆ ಲ್ಯಾಂಡುಗಳು ಅನೇಕ ಕಡೆ ಇರುತ್ತವೆ. ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ 6 ಆಣೆ ಲ್ಯಾಂಡುಗಳಿರುತ್ತವೆ. ಅಂದರೆ, ಕಂದಾಯ ಮೂರನೆ ಒಂದು ಭಾಗವಾಗುತ್ತದೆ. ಮೂರು ರೂಪಾಯಿ ಇದ್ದರೆ, ಒಂದು ರೂಪಾಯಿ ಕಂದಾಯ ಬೀಳುತ್ತದೆ. ಸ್ಟ್ಯಾಂಡರ್ಡ್ ರೇಟು ಇಲ್ಲಿ ಅನೌನ್ಸು ಮಾಡಿರುವುದು ಮ್ಯಾಕ್ಸಿಮಂ ರೇಟು. ಆದ್ದರಿಂದ ಸಾಮಾನ್ಯವಾಗಿ ಮೂರನೇ ಒಂದು ಭಾಗ, ನಾಲ್ಕನೇ ಒಂದು ಭಾಗ, ಐದನೇ ಒಂದು ಭಾಗ, ಅರ್ಧ ಬೀಳುತ್ತದೆ. ನಾವು ಅನೌನ್ಸು ಮಾಡಿರುವುದು 16 ಆಣೆ ಫರ್ಟಿಲಿಟಿ ಸಾಯಿಲ್ಗೆ. ಈಗ ಓದಿ ಹೇಳುತ್ತೇನೆ: ಜೋನು ನಂಬರ ನಾರ್ತ್ ಕೆನರಾದಲ್ಲಿದ್ದು, ಅದರಲ್ಲಿ ಅಂಕೋಲ, ಭಟ್ಕಳ, ಕುಮಟ, ಹೊನ್ನಾವರ, ಕಾರವಾರ ಈ 5 ತಾಲ್ಲೂಕುಗಳಿರುತ್ತವೆ. ಈ ಜೋನು ಒಂದರಲ್ಲಿ ಎಕ್ಸಿಸ್ಟಿಂಗ್ ರೇಟು, 70 ಪೈಸೆ ಪರ್ ಎಕರೆ ಫಾರ್ ಡ್ರೈಲ್ಯಾಂಡ್ಸ್; ನ್ಯೂ ರೂಲ್ಸು ಪ್ರಕಾರ 1 ರೂಪಾಯಿ ಆಗಿದೆ; ಅಲ್ಲಿಗೆ 4 ಆಣೆ ಜಾಸ್ತಿಯಾಗುತ್ತದೆ. ಒಟ್ಟಿಗೆ ಏಳುವರೆ ರೂಪಾಯಿ ಎಕ್ಸಿಸ್ಟಿಂಗ್ ರೂಲ್ಸಿನಲ್ಲಿದೆ; ಈಗ 12 ರೂಪಾಯಿಗಳಾಗುತ್ತವೆ. ಶೇಕಡ ಸುಮಾರು 60 ರಿಂದ 70 ರಷ್ಟು ಜಾಸ್ತಿ ಆಗುತ್ತದೆ. ಒಟ್ಟು ಜೋನಿನಿಂದ, 4-5 ತಾಲ್ಲೂಕುಗಳಿಂದ, ಕಂದಾಯ 5·36 ಲಕ್ಷ ರೂಪಾಯಿ ಬರುತ್ತಾ ಇದೆ. ಈಗ ರಿವಿಷನ್ನಿಂದ 9·57 ಲಕ್ಷ ಬರಬಹುದೆಂದು ಲೆಕ್ಕ ಹಾಕಿಕೊಂಡಿದ್ದೇವೆ. I am telling actuals. ರಿವಿಜನ್ ಸೆಟಲ್‌ಮೆಂಟಿನಿಂದ ಇಂಕ್ರೀಸ್ ಎಷ್ಟೆಂದರೆ ಶೇಕಡ 78.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಂದೊಂದು ಸರ್ವೆ ನಂಬರಿಗೂ ಹಾಕಿಲ್ಲವೆಂದಿರಿ. ಹಾಗಾದರೆ ಹೇಗೆ ಲೆಕ್ಕ ಮಾಡಿದಿರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿರುವ ಕ್ಲಾಸಿಫಿಕೇಷನ್ ನಮಗೆ ಗೊತ್ತಿದೆ. ಹಿಂದಿದ್ದ ಸ್ಟ್ಯಾಂಡರ್ಡ್ ರೇಟು ಗೊತ್ತಿದೆ. ಎಕರೇಜ್ ಕ್ಲಾಸಿಫಿಕೇಷನ್ ಗೊತ್ತಿದೆ. It is very easy to arrive at figures. There was no dispute about that classification. It continues. ಕ್ಲಾಸಿಫಿಕೇಷನ್ ಬಗ್ಗೆ ಯಾರೂ ಅಬ್ಜೆಕ್ಷನ್ ರೇಸ್ ಮಾಡಿಲ್ಲ. ಈಗ ಮಾಡಿರುವುದು :

Total production in 5 years is taken. Total money he has realised is also taken. Then strike the average and decide. Then details for all the 38 zones are fixed as follows: What was the old standard rate per acre for dry and wet crops? What is the proposed new rate per acre on dry and wet crops? What is the total increase. In this proposed system, $6\frac{1}{4}$ per cent of the total gross produce is taken for fixing the land revenue. ಫುರ್ತಿ ಡೀಟೇಲ್ಸ್ ಈ ರೀತಿ ಕೊಟ್ಟಿದೆ. ಉದಾಹರಣೆಗೆ, ನಾರ್ತ್ ಕೆನರಾದಲ್ಲಿ ಡಿವಿಜನ್ ನಂಬರ್ ಒಂದರಲ್ಲಿ ಪೂರ್ತಿ ಇಂಕ್ರೀಸ್ 78 ಪರ್ಸೆಂಟು ; ರಿವಿಜನ್ ಪ್ರಕಾರ:

The other half of the Taluk is really in an elevated area. This is a coastal area and comprises of Supa, Haliyal, Yellapur and Mundgod Taluks.

ಈ ಎರಡನೆ ಜೋನಿನಲ್ಲಿ 119 ಪರ್ಸೆಂಟು ಜಾಸ್ತಿಯಾಗುತ್ತದೆ. ಹಾಗೆಯೇ ಪ್ರತಿಯೊಂದು ಜೋನಿನಲ್ಲಿಯೂ ಇದೆ. ಕೆಲವು ಜೋನುಗಳಲ್ಲಿ ಹಂಡ್ರಡ್ ಪರ್ಸೆಂಟ್ ಜಾಸ್ತಿಯಾಗುತ್ತದೆ. ಶ್ರೀ ವೆಂಕಟೇಗೌಡರ ತಾಲ್ಲೂಕಿನಲ್ಲಿ ಐನೂರು ಪರ್ಸೆಂಟು ಏರಿದೆ. ಕಾರಣ ಇಷ್ಟೆ:

The people of that Taluk were paying very low rates. Compared with those rates, the percentage is very high.

ಉತ್ತರ ಕರ್ಣಾಟಕದಲ್ಲಿ ಇಂಕ್ರೀಸ್ ಕಡಿಮೆ ಇದೆ. ಏಕೆಂದರೆ they were already paying higher rates. ಆದ್ದರಿಂದ ಇಂಕ್ರೀಸ್ ಪರ್ಸೆಂಟೇಜು ಕಡಿಮೆ ಬರುತ್ತದೆ. ಯಾರು ಕಡಿಮೆ ಕೊಡುತ್ತಿದ್ದರೋ ಅವರಿಗೆ ಪರ್ಸೆಂಟೇಜು ಜಾಸ್ತಿಯಾಗುತ್ತದೆ. ಅವರು 2 ರೂಪಾಯಿ ಕೊಡುತ್ತಿದ್ದರೆ, ಅವರಿಗೆ ಇನ್ನೊಂದು 2 ರೂಪಾಯಿ ಜಾಸ್ತಿ ಮಾಡುತ್ತೇವೆ; ಆಗ ಹಂಡ್ರೆಡ್ ಪರ್ಸೆಂಟು ಜಾಸ್ತಿಯಾಗುತ್ತದೆ. ಯಾರು 3 ರೂಪಾಯಿ ಕೊಡುತ್ತಿದ್ದಾರೋ, ಅವರಿಗೆ ಶೇಕಡ 50ರಷ್ಟು ಮಾತ್ರ ಜಾಸ್ತಿಯಾಗುತ್ತದೆ.

In the case of Hyderabad Karnataka, the percentage increase seems to be the lowest. According to the Revision, the increase in Bidar is only 50 per cent.

ಹೈದರಾಬಾದ್ ಸುಲ್ತಾನರಿಗೆ, ನವಾಬರಿಗೆ, ನೈಜಾಮರಿಗೆ ಕಂದಾಯ ಮುಖ್ಯ ವರಮಾನ ಆಗಿತ್ತು. ನೈಜಾಮರು ಸುಲ್ತಾನರಿಗೆ, ನವಾಬರಿಗೆ ತಾಲ್ಲೂಕುಗಳ ಕಂದಾಯವನ್ನು ಹಂಚಿದರು. ಆದ್ದರಿಂದ ಅತ್ಯಂತ ಹೆಚ್ಚಿನ ದರಗಳನ್ನು ವಿಧಾಯಕ ಮಾಡಿದರು. ಆದ್ದರಿಂದ ಆ ರೀಜನ್ನಿಗೆ ಈಗ ಪರ್ಸೆಂಟೇಜು ಕಡಿಮೆಯಾಗಿದೆ.

The criteria for fixation of 6¼ per cent of the gross produce—one anna in the 16 annas are clear. In certain cases, the principle is uniformly applied. In some places, the people were already paying high rates and in such places the increase will be naturally less. In regions where the present rate was very low, the increase would be more. ಒಟ್ಟಿನಲ್ಲಿ ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟು ಕಂದಾಯ ನಮಗೆ ಇಲ್ಲಿಯವರೆಗೆ ಬರುತ್ತಿತ್ತು. ಇದು ಎಷ್ಟೋ ಕಾಲದಿಂದ ನಡೆದುಕೊಂಡು ಬರುತ್ತಿತ್ತು. ಈಗ ನಮಗೆ ಸೇಲ್ಸ್ ಟ್ಯಾಕ್ಸು ಎಂದು ಸುಮಾರು 12—13 ಕೋಟಿಯಷ್ಟು ವಸೂಲು ಹೇಗೂ ಆಗುತ್ತಲೇ ಇದೆ. ಅದರ ಬಗ್ಗೆ ಯಾರೂ ಹೇಳುತ್ತಿಲ್ಲ. ಈ ಕಂದಾಯದ ಬಗ್ಗೆ ಮಾತ್ರ ರೈತನಿಗೆ ಹೊರೆ ಜಾಸ್ತಿ ಮಾಡತಕ್ಕದ್ದು ಸರಿಯಲ್ಲ ಎಂದು ಜನ ಹೇಳುತ್ತಾರೆ. ಹಿಂದೆ ರಾಮ ರಾಜ್ಯದ ಕಾಲದಲ್ಲಿ ಭರತ ಆಳುತ್ತಿದ್ದಾಗ ಅವನು ಒಂದು ಗಂಟೆಯನ್ನು ತನ್ನ ಆಸ್ಥಾನದಲ್ಲಿ ಕಟ್ಟಿಸಿದ್ದನಂತೆ. ಯಾರಾದರೂ ರೈತನಿಗೆ ತೊಂದರೆ ಮಾಡಿದ್ದಾರೆ ಎಂದು ಗೊತ್ತಾದರೆ ಅವರು ಕೂಡಲೇ ಬಂದು ಗಂಟೆಯನ್ನು ಹೊಡೆಯುತ್ತಿದ್ದರಂತೆ. ಆ ಕ್ಷಣ ಅಲ್ಲಿನ ರೈತರು ಕಂದಾಯ ಕೊಡಬೇಕಾಗಿಲ್ಲ ಎಂದು ಅಲ್ಲಿ ಈರುಳ್ಳಿ, ಉರುಳಿಗಡ್ಡೆ ಇತ್ಯಾದಿಗಳನ್ನು ಬೆಳೆಯುತ್ತಿದ್ದರು ಎಂದು ಒಂದು ಕಡೆ ಕಥೆ ಇದೆ. ಕಂದಾಯ ಕೊಡಿ ಎಂದು ಕೇಳಿದರೆ ಬೆಳೆಯನ್ನೇ ಮಾಡಿಲ್ಲ ಎಂದು ಅಲ್ಲಿ ಉರುಳಿಗಡ್ಡೆ, ಈರುಳ್ಳಿ ಇತ್ಯಾದಿ ಗೆಡ್ಡೆ ಗೆಣಸುಗಳನ್ನು ಹಾಕುತ್ತಿದ್ದರಂತೆ. ಆಗಿನ ಕಾಲ ಹಾಗಿತ್ತು. ಈಗ ಕಾಲ ಬದಲಾವಣೆಯಾಗಿದೆ. ಇದರಲ್ಲಿ ರೈತನ ಬಗ್ಗೆ ಪ್ರೀತಿ ತೋರಿಸಿ ಇದನ್ನು ಸ್ವಲ್ಪ ವಿರೋಧ ಮಾಡೋಣ ಎಂದು ಇಲ್ಲಿ ಹೇಳುತ್ತಿದ್ದಾರೆ. ಕಂದಾಯ ಹೆಚ್ಚು ಮಾಡಿದೇವೆ ಎಂದು ಹೇಳುವುದು ಸರಿಯಾಗಿರುವುದಿಲ್ಲ. ಹಿಂದೆ ನೂರು ನೂರೈವತ್ತು ವರ್ಷಗಳ ಹಿಂದೆ ದವಸಗಳ ಧಾರಣೆವಾಸಿಗಳು ಹೇಗಿತ್ತು ಎಂದರೆ ಒಂದು ರೂಪಾಯಿಗೆ 15—20 ಸೇರು ರಾಗಿ ಸಿಗುತ್ತಿತ್ತು. ಹಿಂದೆ ತೋದರಮಲ್ಲನ ಕಾಲದಲ್ಲಿ ಹೇಗಿತ್ತು ಎಂದರೆ, ನಮ್ಮ ಊರಾದ ಮುಳಬಾಗಿಲು ತಾಲ್ಲೂಕಿನಲ್ಲಿ ಇವರ ಬಗ್ಗೆ ಒಂದು ಶಾಸನ ಈಗಲೂ ಇದೆ. ಅವನು ಹಿಂದೆ ಅಕ್ಬರನ ಕಾಲದಲ್ಲಿ ರೆವಿನ್ಯೂ ಮಿನಿಸ್ಟರಾಗಿದ್ದವನು. ಅದರಿಂದಲೋ ಏನೋ ನಾನೂ ಕೂಡ ಈಗ ಈ ದೇಶದ ರೆವಿನ್ಯೂ ಮಂತ್ರಿಯಾಗಿದ್ದೇನೆ. ಅವನು ಇದಕ್ಕೆಲ್ಲಾ ಒಂದು ಸರಿಯಾದ ನ್ಯಾಯವಾದ ರೂಪು ರೇಖೆಗಳನ್ನು ಕೊಡಬೇಕೆಂದು ದೇಶದಲ್ಲಿರುವ ಭೂಮಿಯನ್ನೆಲ್ಲಾ ಸರ್ವೆ ಮಾಡಿಸಿ ಅನಂತರ ಸರ್ವೆ ಸೆಟಲ್‌ಮೆಂಟು ಎಂದು ಮಾಡಿ ಸುಮಾರು ನೂರಾರು ವರ್ಷಗಳ ಮೇಲ್ಪಟ್ಟು ಆಗಿರಬಹುದು. ಆಮೇಲೆ ಮಹಾರಾಷ್ಟ್ರದ ಕಾಲದಲ್ಲಿ ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಆಗಬೇಕೆಂದು ಅಲ್ಲಿಂದ ಇಲ್ಲಿಗೆ ಅಲ್ಲಿನ ಅಧಿಕಾರಿಗಳನ್ನು ಕರೆಸಿಕೊಂಡು ನಮ್ಮ ದೇಶದಲ್ಲೂ ಕೂಡ ಸರ್ವೆ ಸೆಟಲ್‌ಮೆಂಟು ಕೆಲಸಗಳನ್ನು ಮಾಡಿ ಸುಮಾರು 80 ವರ್ಷಗಳಾಗಿರಬಹುದು. ಮೊದಲನೇ ರಿವಿಷನ್ ಅಸೆಸ್‌ಮೆಂಟು ಆಗಿ ಸುಮಾರು 81 ವರ್ಷಗಳಾದವು. ಆ ಮೇಲೆ 20—25 ವರ್ಷಗಳಾದ ಮೇಲೆ ಸೆಕೆಂಡ್ ರಿವಿಷನ್ನು ಎಂದಾಗಬೇಕಾಗಿತ್ತು. ಅದು ಆಗದೆ ಮೂವ್ವತ್ತು ವರ್ಷಗಳಾದ ಮೇಲೆ ಆಯಿತು. ಈ ಮೂವ್ವತ್ತು ವರ್ಷಗಳಿಂದೀಚೆಗೆ ಪುನಃ ಸರ್ವೆ ಸೆಟಲ್‌ಮೆಂಟು ಕೆಲಸ ಮಾಡಿಲ್ಲ. ಈ ಅವಧಿಯೊಳಗೆ ರೈತನ ಮೇಲೆ ಬಹಳ ದುಬಾರಿಯಾಗಿ ಕಂದಾಯದ ಹೊರೆ ಹಾಕುತ್ತಿದ್ದಾರೆಂದು ಯಾರೂ ಹೆದರಬೇಕಾಗಿಲ್ಲ. ಇದರಿಂದೇನೂ 25...30 ಕೋಟಿಯಷ್ಟು ಹೆಚ್ಚು ಉತ್ಪತ್ತಿ ಬರುತ್ತಿಲ್ಲ. ಇಲ್ಲಿಯವರೆಗೂ ಸುಮಾರು ಮೂರುವರೆ ಕೋಟಿಯಷ್ಟು ಕಂದಾಯ ಎಂದು ವಸೂಲು ಮಾಡುತ್ತಿದ್ದರು. ಇದೂ 50 ವರ್ಷಕ್ಕೆ ಹಿಂದೆ ಏನಿತ್ತೋ ಅದನ್ನೇ ಈಗಲೂ ವಸೂಲು ಮಾಡುತ್ತಿದ್ದಾರೆ. ಹಿಂದೆ ಒಂದು ಎಕರೆಗೆ ಎರಡು ರೂಪಾಯಿ ಕಂದಾಯ ಎಂದು ಇದ್ದರೆ ಆಗ ಅವನು ಬೆಳೆಯುತ್ತಿದ್ದ ರಾಗಿಯನ್ನು ಮಾರಿ ಕೊಡಬೇಕಾದರೆ, ಆಗ ರೂಪಾಯಿಗೆ 30 ಸೇರು ರಾಗಿ ಸಿಗುತ್ತಿತ್ತು, ಎರಡು ರೂಪಾಯಿಗೆ ಸುಮಾರು 60 ಸೇರು ರಾಗಿ ಮಾರಿ ಕೊಡಬೇಕಾಗಿತ್ತು. ಈಚೆಗೆ ರಾಗಿ ಬೆಲೆ ಒಂದು ರೂಪಾಯಿಗೆ ನಾಲ್ಕು ಸೇರು ಆಗಿರಬಹುದು. 8 ಸೇರು ರಾಗಿ ಮಾರಿಬಿಟ್ಟರೆ ಅವನು ಎರಡು ರೂಪಾಯಿಗಳಷ್ಟು ಕೊಡಬಹುದು. ಹಿಂದೆ ಇದ್ದ ಧಾರಣೆಗೂ ಈಗಿರುವ ಧಾರಣೆಗೂ ಎಷ್ಟು ವ್ಯತ್ಯಾಸ ಇದೆ ಎನ್ನುವುದನ್ನು ತಾವೇ

(ಶ್ರೀ ಎಂ. ವಿ. ಕೃಷ್ಣಪ್ಪ)

ನೋಡಬಹುದು. ಇದನ್ನೇನೂ ರೈತರಿಗೆ ಅನ್ಯಾಯ ಮಾಡಬೇಕೆಂದು ಹಾಕುತ್ತಿಲ್ಲ. ರೈತರ ಹಿತದೃಷ್ಟಿಯಿಂದ ಸ್ವಲ್ಪ ಕಂದಾಯದ ಹೊರೆ ಜಾಸ್ತಿಯಾದರೆ ಅದಕ್ಕಾಗಿ ಯಾರೂ ಹೆದರಬೇಕಾಗಿಲ್ಲ. ರೈತರಿಗೆ ತೊಂದರೆಯಾಗುತ್ತೆ ಎಂದು ಇಲ್ಲಿ ಹೇಳುತ್ತಿರುವುದು ಸುಮ್ಮನೆ ಒಂದು ಪ್ರಚಾರಕ್ಕಾಗಿ ಎನ್ನುವುದನ್ನು ತಾವು ತಿಳಿಯಬೇಕು. ಇದಕ್ಕೆ ಬದಲಾಗಿ ರೈತರಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ ಎನ್ನುವುದಕ್ಕಾಗಿ ಹೊಡೆದಾಡಿದರೆ ರೈತರನ್ನು ಉದ್ಧಾರ ಮಾಡಿದಂತಾಗುತ್ತದೆ. ಇವೊತ್ತು ರೈತರು ಬೆಳೆಯುವ ಸೇಂಗ, ಮತ್ತು ಇತರ ದವಸಗಳಿಗೆ ನ್ಯಾಯವಾದ ಬೆಲೆ ಸಿಗುತ್ತಾ ಇಲ್ಲ. ಇದಕ್ಕಾಗಿ ಹೊಡೆದಾಡಿದರೆ ಅನುಕೂಲವಾಗುತ್ತದೆ. ಏನೋ ಒಂದು ರೀತಿ ಇದನ್ನು ವಿರೋಧ ಮಾಡಬೇಕು ಎಂದು ಇಲ್ಲಿ ವಿರೋಧ ಮಾಡುತ್ತಿದ್ದಾರೆ. ಅವರು ತಿಳಿದುಕೊಂಡಿರುವಂತೆ ನಮ್ಮ ರೈತಾಪಿ ಜನಗಳು ಅಷ್ಟು ದಡ್ಡರಲ್ಲ. ಅವರೂ ಕೂಡ ತಿಳಿದುಕೊಳ್ಳುತ್ತಾರೆ. ಹಿಂದೆ ಎರಡು ರೂಪಾಯಿ ಕಂದಾಯ ಎಂದಿದ್ದದ್ದು ಎಂದರೆ ಆಗ ರಾಗಿ ಒಂದು ರೂಪಾಯಿಗೆ 30 ಸೇರು ಸಿಗುತ್ತಿತ್ತು ಮತ್ತು ಈಗ ಬೆಲೆ ನೋಡಿದರೆ ಒಂದು ರೂಪಾಯಿಗೆ ನಾಲ್ಕು ಸೇರು ಸಿಗುವುದೂ ಕಷ್ಟ. ಈಗಿನ ಬೆಲೆಗೂ ಆಗ ಇದ್ದ ಬೆಲೆಗೂ ಎಷ್ಟು ವ್ಯತ್ಯಾಸ ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ರಿವಿಷನ್ ಸೆಟಲ್‌ಮೆಂಟು ಮಾಡಿ ಸುಮಾರು 30 ವರ್ಷಗಳ ಮೇಲಾಯಿತು. ಇದನ್ನು ಈಗ ಶಾಸ್ತ್ರೀಯವಾಗಿ ಮಾಡಬೇಕೆಂದು ಮಾಡಲು ಎಲ್ಲ ಜನರಿಂದಲೂ ಒಂದು ನಿರ್ದಿಷ್ಟವಾದ ಅವಧಿಯೊಳಗೆ ಅವರಿಂದ ಬರುವ ಆಕ್ಷೇಪಣೆಗಳನ್ನು ಕೊಡಬೇಕೆಂದು ಹೇಳಿದ್ದರೂ ಇನ್ನೂ ಎಷ್ಟೋ ಕಡೆಗಳಲ್ಲಿ ರೆಪ್ರಸೆಂಟೇಷನ್ನುಗಳನ್ನೇ ಕೊಟ್ಟಿಲ್ಲ. ಇದರಿಂದ ಕೆಲವು ಕಡೆ ಸ್ವಲ್ಪ ನಿಧಾನವಾಗಿದೆ. ಈಗ ಲ್ಯಾಂಡ್ ರೆವನ್ಯೂ ಹೆಚ್ಚು ಮಾಡಿರುವುದು ಒಂದು ರೂಪಾಯಿಗೆ 16 ಆಣೆ ಇದ್ದಾಗ ಒಂದು ಆಣೆಯಷ್ಟು ಮಾತ್ರ ಹೆಚ್ಚು ಮಾಡಲಾಗಿದೆ. ಹಾಗೆ ಅಡಕೆ ತೋಟಕ್ಕೆ, ಕಾಫೀ ತೋಟಕ್ಕೆ ಹಾಕಿರುವುದನ್ನು ನೋಡಿದರೆ 16ನೇ ಒಂದು ಭಾಗದಷ್ಟು ಗ್ರಾಸ್ ಪ್ರಾಡ್ಯೂಸ್ ಮೇಲೆ $6\frac{1}{4}$ per cent of the total gross produce. If an acre of land in Malnad grows more, he has to pay more; if he grows less, it will be less because the principle is one-sixteenth of the total produce.

ಅಲ್ಲದೆ, ನಮ್ಮ ರಾಜ್ಯಕ್ಕೆ ಬಂದಿರುವ ಸೌತ್ ಕ್ಯಾನರಾ ಹಾಗೂ ನಾರ್ತ್ ಕ್ಯಾನರಾ ಜಿಲ್ಲೆಗಳವರು ಕಂದಾಯ ಕೊಡುವುದರಲ್ಲಿ ಯಾವತ್ತೂ ನಿಧಾನ ಮಾಡುವುದಿಲ್ಲ. ಟು ದಿ ಲಾಸ್ಟ್ ಪೈ ಕೊಡುತ್ತಾರೆ.

The earliest telegram is from South Canara that every pie of the land revenue is paid regularly.

ಅಲ್ಲಿನ ರೈತರು ಬಹಳ ವಿದ್ಯಾವಂತರು. ಕಂದಾಯದ ವಿಚಾರದಲ್ಲಿ ಅವರು ಎಲ್ಲರಿಗಿಂತಲೂ ಮೊದಲು ಇದ್ದಾರೆ. ಯಾವಾಗಲೂ ನಮ್ಮ ದೇಶದಲ್ಲಿ ರೆವೆನ್ಯೂ ವಸೂಲಿಯ ಮೊದಲನೇ ಟೆಲಿಗ್ರಾಂ ಎಂದರೆ ಸೌತ್ ಕ್ಯಾನರಾ ಜಿಲ್ಲೆ. ಅವರು ಕಂದಾಯ ಮೊದಲು ಕೊಡುವುದರಲ್ಲಿ ಯಾವತ್ತೂ ಹಿಂದಕ್ಕೆ ಹೋಗಿಲ್ಲ. ಅಲ್ಲದೆ, ಈಗ ಹೆಚ್ಚು ಮಾಡಿರುವ ಕಂದಾಯದಲ್ಲಿ ಶೇಕಡಾ 30ರಷ್ಟು ಆಯಾ ಗ್ರಾಮ ಪಂಚಾಯತಿಗಳಿಗೆ ಮತ್ತು ಶೇಕಡಾ 30ರಷ್ಟು ಅಲ್ಲಿರುವ ತಾಲ್ಲೂಕು ಬೋರ್ಡುಗಳಿಗೆ ಹೀಗೆ ಒಟ್ಟು ಶೇಕಡಾ 60ರಷ್ಟು ಅಲ್ಲಿನ ಜನಕ್ಕೇ ಉಪಯೋಗವಾಗುತ್ತದೆ. ಇದನ್ನು ಯಾರೂ ಇಲ್ಲಿ ಹೇಳುತ್ತಿಲ್ಲ, ಸುಮ್ಮನೆ ಕಂದಾಯ ಹೆಚ್ಚು ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಹಿಂದೆ ನಮಗೆ ಮೂರುವರೆ ಕೋಟಿಯಷ್ಟು ಕಂದಾಯ ಎಂದು ಬರುತ್ತಿದ್ದುದು ಈಗ ಸುಮಾರು ಏಳೂವರೆ ಕೋಟಿಯಷ್ಟು ಸರ್ವೆ ಸೆಟಲ್‌ಮೆಂಟು ಆದ ಮೇಲೆ ಬರಬಹುದು ಎನ್ನುವ ಒಂದು ಅಂದಾಜಿದೆ. ಇದಕ್ಕಾಗಿ ಸರಕಾರದವರು ಅಲ್ಲಲ್ಲಿ ಇನ್‌ಸ್ಪೆಕ್ಟರುಗಳನ್ನು ನೇಮಿಸಿ ಅಲ್ಲಲ್ಲಿ ಸರ್ವೇಯರುಗಳು ಹೋಗಿ ನೋಡಿಕೊಂಡು ಅವರ ಕೆಲಸಗಳನ್ನು ಮಾಡಿರುವುದೆಲ್ಲಾ ರೈತರಿಗೆ ಗೊತ್ತಿದೆ. ಅಲ್ಲದೆ, ಎಲ್ಲೆಲ್ಲಿ ಎರಡು ಬೆಳೆಯಾಗುತ್ತಿದೆ, ಒಂದು ಬೆಳೆಯಾಗುತ್ತಿದೆ ಎನ್ನುವುದೆಲ್ಲಾ ಅವರಿಗೆ ಚೆನ್ನಾಗಿ ಗೊತ್ತಿದೆ, ಎಲ್ಲೆಲ್ಲಿ ಕ್ಯಾಚ್‌ಮೆಂಟ್ ಏರಿಯಾ ಇದೆ ಅದಕ್ಕೆ ಫೀಡ್ ಮಾಡುವ ಅಣೆಕಟ್ಟು, ನಾಲಾ ಎಲ್ಲಿದೆ ಎನ್ನುವುದು ಗೊತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಾವು ಹೇಳುವುದೆಲ್ಲಾ ಸರಿ ಎಂದು ನಾನು ಒಪ್ಪುತ್ತೇನೆ. ಆದರೆ ತಾವು ಕೂಡ ನಿಮ್ಮ ಅಧಿಕಾರಿಗಳನ್ನೇ ನಂಬುತ್ತೀರಾ ?

Sri M. V. KRISHNAPPA.—Thirty per cent of that levy will be left with the Taluk Board. The present method is highly scientific and

dependable. The statistics, the price of the crop, yiled per acre, are more dependable than what it was 50 years ago when the present land settlement was fixed. The yield per acre is scientifically calculated; price is calculated scientifically and with that we are going to double the overall income of the State. There are two or three advantages in this system.

ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಶ್ಯಾನುಭೋಗರು ಆಣೆವಾರಿ ಲೆಕ್ಕ ಹಾಕುತ್ತಾರೆ. ಹೊಸ ಬೆಳೆ ಬಂದಕೂಡಲೆ ಎಷ್ಟು ಬೆಳೆ ನಿಜವಾಗಿ ಬಂದಿರುತ್ತದೆಯೋ ಅಷ್ಟನ್ನೇ ಆಣೆವಾರಿ ಲೆಕ್ಕ ಮಾಡುತ್ತಾರೆ. ಈ ಆಣೆವಾರಿ ಪದ್ಧತಿಯು ಸರಿಯಾದ ರೀತಿಯಲ್ಲಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ನಡೆಯುತ್ತಿದೆ. ಈ ಪದ್ಧತಿಯಿಂದ 90 ಪರ್ಸೆಂಟ್ ಕರೆಕ್ಟ್ ಆಗಿ ಲೆಕ್ಕ ದೊರೆಯುತ್ತದೆ. ಈ ರೀತಿ ಆಣೆವಾರಿ ಲೆಕ್ಕವು ರೈತರ ಹಿತದೃಷ್ಟಿಯಿಂದ ಇರುತ್ತದೆ. ಆರು ಆಣೆ ಬಂದಿದ್ದರೇ ಆರು ಆಣೆ ಬೆಳೆ ಎಂದು ಲೆಕ್ಕದಲ್ಲಿ ಬರೆಯುತ್ತಾರೆ. ಈ ಲೆಕ್ಕದ ಪ್ರಕಾರ ಕಂದಾಯ ವಸೂಲಿ ನಡೆಯುತ್ತದೆ. ಆರು ಆಣೆ ಬೆಳೆ ಬಂದರೆ ಶೇಕಡ 50 ರಷ್ಟು ಕಂದಾಯ ವಸೂಲಿ ಸಸ್ಪೆಂಡ್ ಮಾಡಲಾಗುವುದು. ಹೀಗೆ ಒಂದು ಪದ್ಧತಿಯು ನಡೆದುಕೊಂಡು ಬಂದಿದೆ. ಈ ಪದ್ಧತಿಯು ಹಳೇ ಮೈಸೂರು ಪ್ರದೇಶದಲ್ಲಿ ಜಾರಿಗೆ ಬರಲಿದೆ. ಸರಿಯಾಗಿ ಬೆಳೆ ಬಂದರೆ ಪೂರ್ತಿ ಕಂದಾಯ ರೈತರು ಕೊಡುತ್ತಾರೆ. ಹಿಂದಿನ ಮೂರು ವರ್ಷದ ಆಣೆವಾರಿ ನೋಡಿ ಆವರೇಜ್ ತೆಗೆಯುತ್ತಾರೆ. ಇದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಈ ಆಣೆವಾರಿ ಪದ್ಧತಿ ಜಾರಿಗೆ ಬರಲಿದೆ ಎಂದು ಹಳೇ ಮೈಸೂರು ಪ್ರದೇಶದಲ್ಲಿ ರೈತರು ತಿಳಿದುಕೊಂಡಿದ್ದಾರೆ. ಈ ಪದ್ಧತಿಯು ಬಹಳ ಶಾಸ್ತ್ರೀಯವಾದ ಪದ್ಧತಿ ಆಗಿದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಇದುವರೆಗೆ ಲ್ಯಾಂಡ್ ರಿಫಾರ್ಮ್ಸ್ ಜಾರಿಗೆ ಬಂದಿಲ್ಲ. ಆದುದರಿಂದ ಕಂದಾಯ ಇರಾಖೆಯವರು ಸ್ಟಾಂಡರ್ಡ್ ರೇಟ್ ಹೇಗೆ ಗೊತ್ತು ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ. —ರಿಪೋರ್ಟ್ ಓದಿದರೆ ಅರ್ಥವಾಗುತ್ತದೆ. ಸ್ಟಾಂಡರ್ಡ್ ರೇಟ್ ಹೇಗೆ ಕ್ಯಾಲ್ಕ್ಯುಲೇಟ್ ಮಾಡಬೇಕು ಎನ್ನುವುದಕ್ಕೆ ಒಂದು ಪ್ರೊಸೀಜರ್ ಇದೆ. ಒಂದು ಝೋನ್ ತೆಗೆದುಕೊಂಡು ಅಲ್ಲಿಯ ಕ್ರಾಪ್ಸ್ ಮೇಲೆ ಇದನ್ನು ತೀರ್ಮಾನ ಮಾಡುತ್ತಾರೆ. ಗ್ರೌಂಡ್ ನಟ್, ಕಾಟನ್ ಮುಂತಾದವುಗಳ ಬಗ್ಗೆ ಕಳೆದ ಐದು ವರ್ಷಗಳಲ್ಲಿ ಎಷ್ಟು ಯೀಲ್ಡ್ ಬಂದಿದೆ ಎನ್ನುವುದನ್ನು ತೆಗೆದುಕೊಂಡು they strike at an average rate. Those crops which occupy an area of 20 per cent and above are called principal crops. They strike at an average figure that is called standard rate.

Sri V. S. PATIL.—The standard rates are given by these Survey Officers. The maximum rates are to be fixed now. Then it appears assessment is to be made by subordinate officers. But at that time, are they going to take into consideration the various facilities or deficiencies in particular lands or fields as it was done in the original or general or in the revisional survey in our area? At that time the standard rate was fixed, that is the maximum rate. In every field or piece of land, whether there is a source of perennial water, whether there is a source of some seasonal water, whether there is a source of any other well or project or other source of water—on these considerations, the assessments were fixed – even adjoining fields used to pay different assessments. Are these methods followed in this case also, or is the Government going to fix a flat rate which is to be based on this resolution? I want an enlightenment on these points.

Sri M. V. KRISHNAPPA.—You are referring to the classification of lands. We have not touched the classification now. It is only revision of settlement. It is not survey and settlement. We have not taken survey. Whatever the classification done 100 years ago still exists.

(SRI M. V. KRISHNAPPA)

Only in such cases, where conversion takes place, dry converted into wet, the farmer has to pay the changed revenue and also in the case of dry land converted into garden. So this change will be taken into consideration. Classification is based on the old system only. It was worked out satisfactorily. Under this classification, for each variety, we have calculated the standard rate and the standard rate will be according to the standard acre. Jantries will be prepared and according to the Jantries system; the land near the village will have to pay more than the land a few yards away.

ಶ್ರೀ ಪಿ. ವೆಂಕಟಗಿರಿಯಪ್ಪ.—ಹಳೇ ಮೈಸೂರು ಪ್ರದೇಶದಲ್ಲಿ 70 ವರ್ಷಗಳ ಹಿಂದೆ ಒಂದು ಸಲ ರಿವಿಜನ್ ಸೆಟಲ್‌ಮೆಂಟ್ ಆಯಿತು. 40 ವರ್ಷಗಳ ಹಿಂದೆ ಒಂದು ಸಲ ಆಯಿತು. ಹೀಗೆ ಎರಡು ಸಲ ಆಗಿದೆ. ಹಿಂದೆ ಎಷ್ಟು ಕಂದಾಯ ಇದ್ದಿತೋ ಅಷ್ಟೇ ಕಂದಾಯ ಇವತ್ತು ಇದೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದಕ್ಕೆ ಮಾಡಿದ ರಿವಿಜನ್ ಸೆಟಲ್‌ಮೆಂಟ್‌ಗೆ ಸೈಂಟಿಫಿಕ್ ಬೇಸಿಸ್ ಇರಲಿಲ್ಲ. ಮನಸ್ಸಿಗೆ ಬಂದ ಹಾಗೆ ಮಾಡುತ್ತಾ ಇದ್ದರು. In the case of individual holding 100 per cent increase limit is there. If a farmer was paying Rs. 2, in any case, it should not exceed Rs. 4. In the case of village holding, it should not exceed 63 or 64 per cent. In the case of State 35 per cent. But, it was not a scientific system. Whether a person is earning more by cultivating cash crops 35 per cent limit was fixed. That limitation was taken away under the Bombay Act.

SRI V. S. PATIL.—At the time of survey conducted in our area, there were tanks or natural springs which belonged to the Government. From these, lands were to be irrigated or used to be irrigated at that time. On that basis the assessment was fixed. In the neighbouring area there were variations in fixing this assessment. In some cases, these tanks have disappeared or silted up and these have been handed over for cultivation. Practically there were no tanks at all. Similarly in the case of natural springs and water canals which were maintained by Government in the original survey, they have disappeared and those lands are not getting water at all. Whether these changed conditions are going to be taken into consideration while fixing the present revision of assessment, I want to know. This has happened in our area.

SRI M. V. KRISHNAPPA.—Such cases exist in old Mysore also. There were tanks and springs working but now they have disappeared. Such farmers who are affected by these may give representation to the concerned Officers and get exemption from the wet assessment. It will be taken into account only in the next settlement.

SRI V. S. PATIL.—In this grouping, in our area, *viz.*, Belgaum District, it appears that the actual situation of a few villages was not taken into consideration by the Survey Officer. Can I bring in an amendment to this Resolution for changing the groups because I know definitely which particular village must come under the description for a particular group? So, I should like to know from the Hon'ble

Revenue Minister whether it is feasible for me to bring in an amendment to bring villages on line which are described by the Survery Officers. There are few villages which ought to have been included in a particular category or group and they have been excluded. So, that will really come in the way of fixing the assessment of those villages even though climatic conditions, situation, rainfall, etc., are similar. If the Government is willing to consider it as reasonable, then alone I should like to move. Otherwise, I do not want to waste the time of the House.

SRI M. V. KRISHNAPPA.—The zones are perfect. There is bound to be some difference, because the fertility of the soil differs from place to place. I have seen an elder brother's field is more fertile than the yonger brother's field. They have done their best and the zones are highly perfect. There will be always certain villages where they feel that injustice is done to them. In the adjoining zones the rates may be high and in some zones the rates may be low. I do not think that this is the time to think of changing the zones. That time is over and we cannot try to change the zones now.

SRI M. C. BASAPPA (Chamarajanagar).—I want to know whether the Government, in the Revenue Department, is maintaining a list of crops which constitute the Bagayat?

ಶ್ರೀ ಎಂ. ವಿ. ಕೃಷ್ಣಪ್ಪ.—ಧೃವ ಫಸಲು ಎಂಬ ಒಂದು ಬ್ರಾಡ್ ಕ್ಲಾಸಿಫಿಕೇಷನ್ ಮಾಡಿದರಲ್ಲಿ—ಅಡಕೆ, ತೆಂಗು, ಮಾವು, ಹಲಸು ಇತ್ಯಾದಿಗಳನ್ನು ಸೇರಿಸಿದೆ,

Those items of crops which come under the Bagayat have not been discussed and mentioned and catalogued.
It is generally understood.

SRI V. S. PATIL.—I am not asking for changing the zones. But, within one zone they have divided those villages into five groups. So, in one or two groups some change is quite essential looking to the very remarks or the basis taken by the Survey Officer. I should like to know whether the Government is going to consider such cases.

SRI M. V. KRISHNAPPA.—It is too late. In the old system, people were afraid of the high rates. Whether it is less fertile or more fertile, it is 1/6th of the total gross produce. If it is less fertile, then also it is 1/6th of the total gross produce. If it is more fertile, it derives more income and 1/6th of the gross produce is more.

ಶ್ರೀ ಎಸ್. ಗೋಪಾಲ ಗೌಡ.—ಈ ನಿರ್ಣಯದ ಮೇಲೆ ಚರ್ಚೆ ಆರಂಭವಾಗುವುದಕ್ಕೆ ಮುಂಚೆ ಈ ಮಸೂದೆಯ ಬಗ್ಗೆ ಕೆಲವು ಸಂಶಯಗಳನ್ನು ನಿವಾರಣೆಮಾಡಿದ ನಂತರ ಈ ಚರ್ಚೆಯನ್ನು ಪ್ರಾರಂಭಮಾಡುವುದು ಒಳ್ಳೆಯದೆಂದು ಭಾವಿಸುತ್ತೇನೆ. ಈಗತಾನೆ ಮಾನ್ಯ ಮಂತ್ರಿಗಳು ಈ ನಿರ್ಣಯದ ವಿಚಾರವನ್ನು ಪ್ರಸ್ತಾಪಿಸುತ್ತಾ ಈ ವಿಚಾರದಲ್ಲಿ ಒಟ್ಟು 30 ಜೋನುಗಳನ್ನಾಗಿ ಮಾಡಿ ಅದರಲ್ಲಿ 23 ಭಾಗಗಳನ್ನು ಮಾಡಲಾಗಿದೆ ಎಂದೂ, ಇದನ್ನು ಸರ್ಕಾರದವರು ಬಹಳ ವೈಜ್ಞಾನಿಕವಾಗಿ ಮಾಡಿರುತ್ತಾರೆಂದೂ ಅವರು ಅಪ್ಪಣೆಕೊಡಿಸಿದರು. ಆದರೆ ಮೊದಲನೇ ಜಿಲ್ಲೆಯಾದ ನಮ್ಮ ಶಿವಮೊಗ್ಗ ಜಿಲ್ಲೆಯ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಮಲೆನಾಡು ಶಿವಮೊಗ್ಗ ಜಿಲ್ಲೆ ಎಂದು ಹೇಳಿ, ಅದರಲ್ಲಿ ಭದ್ರಾವತಿಯನ್ನು ಕೈಬಿಟ್ಟಿದ್ದಾರೆ. ಆದರೆ ಈ ಜೋನುಗಳನ್ನು ಅಧಿಕಾರಿಗಳು ಯಾವ ಒಂದು ಆಧಾರದ ಮೇಲೆ ವಿಂಗಡಿಸಬೇಕೆಂದು ಹೇಳಿದ್ದಾರೋ ಅಥವಾ ಒಂದು ಆರ್ಡರನ್ನು ಹೊರಡಿಸಿದ್ದಾರೋ ಅದು ಈಗಿನ ಹೊಸ ವಿಧಿಯಲ್ಲಿ ಅಂದರೆ, ರಿವಿಜನ್ ಆಫ್ ಸೆಟಲ್‌ಮೆಂಟಿನ 121ನೇ ಒಳ ಪ್ರಕರಣ (2) ರ ಪ್ರಕಾರ ಹೊರಡಿಸಿದ್ದಾರೋ ಅಥವಾ ನಮ್ಮ ಒಂದು ಕಂದಾಯದ ಪಟ್ಟಿಯ ಪ್ರಾಕಾರ ಈ ಕಂದಾಯದ ರೇಟನ್ನು ಏರಿಸಿದ್ದಾರೋ ಹೇಗೆ ಎಂಬುದನ್ನು

(ಶ್ರೀ ಎಸ್. ಗೋಪಾಲಗೌ

ವಿವರಿಸಬೇಕು. ಇನ್ನು ಇಲ್ಲಿಯುತನಕ ಕರೆದಿದ್ದ ಅಬ್‍ಜಕ್ಷನ್‍ಗಳ ಬಗ್ಗೆ ಯಾವ ಯಾವ ರೀತಿಯ ಅಬ್‍ಜಕ್ಷನ್‍ಗಳು ಬಂದಿವೆ ಎಂಬುದನ್ನು ತಿಳಿಸಬೇಕು. ಅವರೆ ಕೆಲವು ಜಿಲ್ಲಾಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಕೆಲಸದ ವೇಳೆಯಲ್ಲಿ ಸದರಿ ಅಬ್‍ಜಕ್ಷನ್‍ಗಳನ್ನು ನೋಡಿಕೊಂಡು ಹೋಗಬಹುದೆಂದು ತಿಳುವಳಿಕೆಯನ್ನು ಜನರಿಗೆ ಕೊಟ್ಟಿದ್ದುಂಟು. ಅವರೆ ಈ ವಿಷಯವನ್ನು ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ವಿಶದಪಡಿಸಲಿಲ್ಲ. ಅವರು ಈ ನಿರ್ಣಯವನ್ನು ಮಂಡಿಸುವಾಗ ಇದರಲ್ಲಿ ಯಾವ ಅಭ್ಯಂತರವೂ ಇಲ್ಲ, ಹಾಗೆ ಯಾರಿಗಾದರೂ ಸಂಶಯ ಬಂದರೆ ಅವರು ವಿವರಣೆಯನ್ನು ಪಡೆಯಬಹುದೆಂದು ಹೇಳಿದ್ದರು. ಆದರೆ ಮಂತ್ರಿಗಳು ಈ ವಿಚಾರಗಳೊಂದನ್ನೂ ತಿಳಿಸಲಿಲ್ಲ. ಆದಕಾರಣ ನಮಗೀಗ ಇವರು ಹೊರಡಿಸಿರತಕ್ಕ ಆರ್ಡರಿನ ಕಾಪಿಯನ್ನೂ ಮತ್ತು ಬಂದಿರತಕ್ಕ ಅಬ್‍ಜಕ್ಷನ್‍ಗಳ ಒಂದು ಪಟ್ಟಿಯನ್ನೂ ಕೊಡಬೇಕು. ಈಗ ನಾವು ಈ ನಿರ್ಣಯವನ್ನು ಇಲ್ಲಿ ಪಾಸ್‍ಮಾಡಿಬಿಟ್ಟರೆ ಇನ್ನು ಮುಂದಕ್ಕೆ 30 ವರ್ಷಗಳವರೆಗೂ ಹೆಚ್ಚಿನ ಕಂದಾಯವನ್ನು ತೆರಬೇಕಾಗುವುದು. ಆದ್ದರಿಂದ ಚರ್ಚೆಗೆ ಮುನ್ನ ನಾನೀಗ ಕೇಳಿರತಕ್ಕ ವಿವರಣೆಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಬಗ್ಗೆ ಒಟ್ಟು 5,98,116 ಅಬ್‍ಜಕ್ಷನ್‍ಗಳು ಬಂದಿವೆ. ಅವುಗಳನ್ನೆಲ್ಲಾ ತಮ್ಮ ಮುಂದೆ ಇಲ್ಲಿ ಟೇಬಲ್ ಮೇಲೆ ಇಡಲಾಗಿದೆ.

12,592 ತಕರಾರುಗಳು ತಮ್ಮ ಜಿಲ್ಲೆಯಿಂದ ಬಂದಿವೆ. ಅದರಲ್ಲೂ ಕೂಡ ಒರಿಜಿನಲ್ಸ್ ಮತ್ತು ತಮ್ಮ ಹಸ್ತಾಕ್ಷರ ಇದ್ದರೆ ಅದೂ ಕೂಡ ಬಹುಶಃ ಅಲ್ಲೇ ಇರುತ್ತದೆ. ಇನ್ನು ಯಾವ ಯಾವ ವಿಷಯದಲ್ಲಿ ತಕರಾರು ಮಾಡಿದ್ದಾರೆ ಎಂಬುದು. 60 ಸಾವಿರ ತಕರಾರುಗಳು ಇದ್ದರೂ ಕೂಡ ಅದರಲ್ಲೆಲ್ಲಾ ಮೂರು ನಾಲ್ಕು ಅಂಶಗಳೇ ಇರುವುದು. ಎರಡು ರೂಪಾಯಿ ಇದ್ದದ್ದು ನಾಲ್ಕೈದು ರೂಪಾಯಿ ಮಾಡಿದ್ದೀರಿ, ಅದು ಬಹಳ ಹೆಚ್ಚು ಅನ್ನುವುದು ಮೊದಲನೆಯದು. ಎರಡನೆಯದು, ನೀವು ಯೀಲ್ಡ್ ತೆಗೆದುಕೊಂಡರಲ್ಲಾ ಎಕರೆಗೆ ಇಷ್ಟು ಎಂದು, ಅದನ್ನು ಯಾವ ಆಧಾರದ ಮೇಲೆ ತೆಗೆದುಕೊಂಡಿರಿ ಅನ್ನುವುದು. ನಮ್ಮ ಏರಿಯಾದಲ್ಲಿ ನೀವು ಕೊಟ್ಟಿರುವುದು ಬಹಳ ಜಾಸ್ತಿ, ಅದು ಕಡಿಮೆಯಾಗಬೇಕಾಗಿತ್ತು ಎಂದು ಹೇಳಿದ್ದಾರೆ. ಇನ್ನು ಪ್ರೈಸಸ್, ಎಕರೆಗೆ ಇಷ್ಟು ಉತ್ಪನ್ನ ಆಯಿತು ಎಂದು ಹೇಳಿದ್ದೀರಲ್ಲಾ ಅದು ಮಾರಿರುವ ಬೆಲೆ ಜಾಸ್ತಿ ತೆಗೆದುಕೊಂಡಿದ್ದೀರಿ, ಆ ವರ್ಷ ಅಷ್ಟಕ್ಕೆ ಮಾರಿಲ್ಲ ಕಡಿಮೆ ಆಯಿತು, ಆದರೆ ಜಾಸ್ತಿ ಹಾಕಿದ್ದೀರಿ ಎಂದು. ಈ ಮೂರು ಮುಖ್ಯವಾದ ಅಂಶಗಳು. ಸಾಮಾನ್ಯವಾಗಿ ಒಂದು ತಾಲ್ಲೂಕನ್ನು ಒಂದು ಯೂನಿಟ್ಟನ್ನಾಗಿ ತೆಗೆದುಕೊಂಡಿದ್ದೇವೆ. ಮಲೆನಾಡಿನಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಒಂದು ಭಾಗದಲ್ಲಿ ವರ್ಷಕ್ಕೆ 25 ಇಂಚು ಮಳೆಯಾಗುತ್ತದೆ. ಅದೇ ತಾಲ್ಲೂಕಿನ ಇನ್ನೊಂದು ಭಾಗದಲ್ಲಿ 125 ಇಂಚು ಮಳೆಯಾಗುತ್ತದೆ. ತಾಲ್ಲೂಕನ್ನು ಒಡೆದು ಒಂದು ಕಡೆ ಒಂದು ಗ್ರೂಪ್ ಇನ್ನೊಂದು ಕಡೆ ಮತ್ತೊಂದು ಗ್ರೂಪ್ ಅಂತ ಮಾಡುವುದಕ್ಕಾಗುವುದಿಲ್ಲ. ಇದೇ ರೀತಿಯಲ್ಲಿ ಭೂಮಿಯ ವಿಷಯದಲ್ಲೂ ವ್ಯತ್ಯಾಸ ಬರುತ್ತದೆ. ಅಣ್ಣನ ಹೊಲಕ್ಕಿಂತ ತಮ್ಮನ ಹೊಲ ಫಲವತ್ತಾಗಿರುತ್ತದೆ. ಒಂದೇ ಭೂಮಿಯಲ್ಲಿ ಒಂದು ಭಾಗ ಫಲವತ್ತಾಗಿರುತ್ತದೆ. ಇನ್ನೊಂದು ಭಾಗ ಫಲವತ್ತಾಗಿರುವುದಿಲ್ಲ. ಆದ್ದರಿಂದ ಇದನ್ನೆಲ್ಲಾ ಗಮನಿಸಿ ತಾಲ್ಲೂಕನ್ನು ಒಡೆಯಲಿಲ್ಲ, ಇಬ್ಭಾಗ ಮಾಡಲಿಲ್ಲ. ಮತ್ತು ಎರಡು ಗ್ರೂಪ್ಸನ್ನು ಒಂದಾಗಿ ಸೇರಿಸುವ ಕೆಲಸ ನಡೆದಿಲ್ಲ. ಆದ್ದರಿಂದ ಮೊದಲನೆಯ ತಕರಾರು ಏನು ಎಂಬುದನ್ನು ಹೇಳಿದ್ದೇನೆ. ಮೊದಲು ಮೂರೂವರೆ ಕೋಟಿ ರೂಪಾಯಿ ಕಂದಾಯ ಆಗುತ್ತಾ ಇತ್ತು, ಈಗ 7 ಕೋಟಿ ರೂಪಾಯಿ ಆಗುತ್ತದೆ. ರಿವಿಜನ್ ಸೆಟ್ಲ್‍ಮೆಂಟ್ ಆಗುವಾಗ ಸೈಂಟಿಫಿಕ್ ಆಗಿ ರೂಪಾಯಿನಲ್ಲಿ ಒಂದಾಣೆ ಅಂತ ಪ್ರೈಸ್ ಇಟ್ಟುಕೊಂಡು ಮಾಡಿದ್ದೇವೆ. ಹಿಂದೆ ಎರಡು ರೂಪಾಯಿ ಕಂದಾಯ ಕೊಡಬೇಕಾಗಿದ್ದರೆ 35 ಸೇರು ರಾಗಿ ಮಾರಬೇಕಾಗಿತ್ತು. ಇವತ್ತು 4 ಸೇರು ಮಾರಿದರೆ ಸಾಕು. ಇನ್ನು ಯೀಲ್ಡ್ ವಿಷಯ ಹೇಳುವುದಾದರೆ, ಹಿಂದಿಗಿಂತಲೂ ಈಗಿನ ಅಂಕಿಅಂಶಗಳು ಅಧಾರಯುತವಾದವು. ಏಕೆಂದರೆ ನಮ್ಮಲ್ಲಿ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‍ಮೆಂಟ್ ಇವೆ, ಎಲ್ಲಾ ಪ್ರದೇಶಗಳನ್ನೂ ಸುತ್ತಿಕೊಂಡು ಬಂದು ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ಸ್, ರ್‍ಯಾಂಡಂ ಸ್ಯಾಂಪಲ್ ಸರ್ವೆ ಇವುಗಳನ್ನೆಲ್ಲಾ ಮಾಡಿ ಮೈಸೂರು ಸಂಸ್ಥಾನದಲ್ಲಿ ಒಂದು ಎಕರೆಗೆ ಬತ್ತ ಎಷ್ಟು ಬೆಳೆಯುತ್ತದೆ, ರಾಗಿ ಎಷ್ಟು ಬೆಳೆಯುತ್ತದೆ ಎಂಬುದನ್ನು ನಿಗದಿ ಮಾಡಿದ್ದಾರೆ. ಇದು ಹಿಂದೆ 30 ವರ್ಷದಿಂದ ಇದ್ದ ಅಂಕಿಅಂಶಗಳಿಗಿಂತಲೂ ಆಧಾರಯುತವಾದುದು ಎಂದು ಆಗಲೇ ಉತ್ತರ ಕೊಟ್ಟಿದ್ದೇನೆ. ಬೆಲೆ ವಿಷಯ ಕೂಡ ಅಷ್ಟೆ. ಈಗ ರೆಗ್ಯೂಲೇಟೆಡ್ ಮಾರ್ಕೆಟ್ ಇವೆ. ಅಡಕೆ, ತೆಂಗು ಇವೆಲ್ಲಾ ರೆಗ್ಯೂಲೇಟೆಡ್ ಮಾರ್ಕೆಟ್ ಮೂಲಕ ಹರಾಜು ಆಗುತ್ತದೆ. ಇದನ್ನೆಲ್ಲಾ ನಾನು ಆಗಲೇ ಹೇಳಿದ್ದೇನೆ.

Sri H. R. KESHAVA MURTHY.—Sir, I beg to move :

" In page 3 of the Official Resolution after Item 'Revision Settlement Report of Zone No. VII" the followi ng priviso shall be added :—

'Provided that the maximum standard rates of assessment proposed do not exceed the maximum rates now existing in all cases of lands, *viz.*, dry, wet and bagayet."'

Mr. DEPUTY SPEAKER.—Amendment moved :

" In page 3 of the Official Resolution after Item ' Revision Settlement Report of Zone No. VII " the following proviso shall be added :—

' Provided that the maximum standard rates of assessment proposed do not exceed the maximum rates now existing in all cases of lands, *viz.*, dry, wet and bagayet."

Sri G. V. GOWDA.—If you were to permit me I beg to move an amendment to that amendment to delete that word "Zone VII".

ಶ್ರೀ ಕೆ. ಲಕ್ಕಪ್ಪ.—ಲ್ಯಾಂಡ್ ರೆವಿನ್ಯೂ ಅನ್ನು ಪೂರ್ತಿಯಾಗಿ ಮನ್ನಾ ಮಾಡಬೇಕೆಂದು ಹೇಳಿ ನಾನು ಒಂದು ತಿದ್ದುಪಡಿಯನ್ನು ಕೊಟ್ಟಿದ್ದೆ, ಆ ವಿಷಯದಲ್ಲಿ ಒಂದು ಮಾತು ಹೇಳಬೇಕೆಂದು ಇದ್ದೇನೆ. ಅದಕ್ಕೆ ಕ್ಲಾರಿಫಿಕೇಷನ್ ಬೇಕು.

Mr. DEPUTY SPEAKER.—The member can argue it at the time of Debate as that is not a clarification. That is a different matter altogether.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಕಂದಾಯದ ಪುನರ್ವಿಮರ್ಶನಾ ನಿರ್ಣಯವನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಕಂದಾಯ ಮಂತ್ರಿಗಳು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಾ ಇರತಕ್ಕ ಕಾಲದಲ್ಲಿ ಬಹಳ ಲಘುವಾಗಿ, ನಗುಮುಖದಿಂದ ಈ ಕಂದಾಯದ ಮಸೂದೆಯನ್ನು ರೈತರು ಸ್ವಾಗತಿಸುತ್ತಾರೆ ಎಂಬ ಭ್ರಮೆಯಿಂದ ಅವರು ಸ್ವಪ್ನಾವಸ್ಥೆಯಲ್ಲಿ ಇದ್ದರು. ಆದ್ದರಿಂದ ಈ ಮಸೂದೆಯನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಅವರು ಗಂಭೀರವಾಗಿ ಈ ಮಸೂದೆಯನ್ನು ಮಂಡಿಸಿದರೇ ಎನ್ನುವುದು ನನಗೆ ಶಂಕೆಯನ್ನು ಉಂಟು ಮಾಡುತ್ತಾ ಇದೆ. ಕೃಷ್ಣಪ್ಪನವರು ಮತ್ತು ಅವರ ಅನುಯಾಯಿಗಳು 1942ನೇ ಇಸವಿಯಲ್ಲಿ, ರಾಜಕೀಯ ಚಳವಳಿಯಲ್ಲಿ ಅವರ ಅನೇಕ ಭಾಷಣಗಳಲ್ಲಿ ಹೇಳುತ್ತಾ ಇದ್ದ ಮಾತುಗಳು ಈಗಲೂ ಕೂಡ ನನ್ನ ಕಿವಿಗೆ ಬೀಳುತ್ತಾ ಇವೆ. ಆಗ ಅವರು ಹೇಳಿದರು, ಈ ದೇಶದಲ್ಲಿ ಭೂಮಿ ತಾಯಿ ಬೆಳೆಯುತ್ತಾಳೆ, ಮಳೆರಾಯ ಮಳೆ ಕೊಡುತ್ತಾನೆ ಏಕೆ ಕಂದಾಯ ಕೊಡಬೇಕು ಎಂದು ಹೇಳಿ ಶ್ರೀಮಾನ್ ವೀರಣ್ಣಗೌಡರು, ಎಂ. ಎನ್. ಜೋಯಿಸ್ ಅವರು ಮತ್ತು ಶ್ರೀಮಾನ್ ಕೃಷ್ಣಪ್ಪನವರು ಅನೇಕ ಬಹಿರಂಗ ಸಭೆಗಳಲ್ಲಿ ಹೇಳಿದ್ದನ್ನು ಕೇಳಿದ್ದೇನೆ. ಆಗ ಭೂಮಿ ತಾಯಿ ಬೆಳೆಯುತ್ತಾಳೆ, ಮಳೆರಾಯ ಮಳೆ ಕೊಡುತ್ತಾನೆ ಎಂದು ಹೇಳುತ್ತಾ ಇದ್ದ ಜನ ಇವತ್ತು ಕಂದಾಯವನ್ನು ವಜಾ ಮಾಡುತ್ತಾ ಇಲ್ಲ, ಅದಕ್ಕೆ ಬದಲಾಗಿ ಕಂದಾಯವನ್ನು ಮೂರು ಪಟ್ಟು ಒಂದೇ ಸಾರಿ ಜಾಸ್ತಿ ಮಾಡಿ, ಅವನ್ನು ರೈತರು ಸಂತೋಷದಿಂದ ಕೊಡುತ್ತಾರೆ ಎಂದು ಹೇಳುವುದನ್ನು ಕೇಳಿದರೆ ನಿಜವಾಗಿಯೂ ಕೂಡ ಕೃಷ್ಣಪ್ಪನವರನ್ನು.........

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯ ಡಬ್ಬಲ್ ಆಗುವುದಿಲ್ಲ. ಸರ್ಚಾರ್ಜ್ ಸೇರಿ, 3-4 ವರ್ಷದಿಂದ ಕೊಡುತ್ತಾ ಇರುವಷ್ಟೇ ಕೊಡುತ್ತಾರೆ, ಇನ್ನೇನೂ ಜಾಸ್ತಿಯಾಗುವುದಿಲ್ಲ. ಕಂದಾಯ ಜಾಸ್ತಿಯಾಗುತ್ತದೆ ಎನ್ನುವುದು ಸುಳ್ಳು.

Sri S. M. KRISHNA.—I take objection to the word ' sullu ' uttered by the Hon'ble Minister for Revenue. He must withdraw that word.

ಶ್ರೀ ಎಂ. ವಿ. ಕೃಷ್ಣಪ್ಪ.—ಸತ್ಯಕ್ಕೆ ದೂರವಾದುದು. 'ಸುಳ್ಳು' ಎನ್ನುವ ಪದವನ್ನು ವಾಪಸು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಅದ್ದರಿಂದ ಕಂದಾಯ ಮಂತ್ರಿಗಳು ಈ ದಿವಸ ಅವರು ಬಹುಶಃ ಅಂತರಂಗದ ಪ್ರೀತಿಯಿಂದ ಇದನ್ನು ಹೇಳುತ್ತಾ ಇಲ್ಲ. ಬಲಾತ್ಕಾರವಾಗಿ ಹೇಳುತ್ತಾ ಇದ್ದಾರೆ. ಅವರು ರೈತನ ಮಕ್ಕಳೇ ಆದರೂ ಕೂಡ ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಬೇಕಾಯಿತಲ್ಲಾ ಎಂದು ಹೇಳಿ ಒತ್ತಾಯದಿಂದ ಅಥವಾ ಬಲಾತ್ಕಾರದಿಂದ ಅವರು ಒಂದು ಗಂಟೆ ಕಾಲ 'ಲೇಬರ್ಡ್ ಸ್ಪೀಚ್' ಎಂದು ಇಂಗ್ಲೀಷ್‌ನಲ್ಲಿ ಹೇಳುತ್ತಾರೆ, ಹಾಗೆ ಬಹಳ ಅಳವಾಗಿ ಅಳವಾಗಿ ಹೇಳಬೇಕಲ್ಲಾ ಎಂದು ಹೇಳಿ ಈ ಒಂದು ಮಸೂದೆಯನ್ನು ಮನಸ್ಸು ಇಲ್ಲದೇ ಇದ್ದರೂ ಕೂಡ ಮನಸ್ಸು ಮಾಡಿ ಈ ಸಭೆಯ ಮುಂದೆ ಇಟ್ಟಿದ್ದಾರೆ.

ಸಚಿವರು ಕೊಟ್ಟಿರುವ ವಿವರಣೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುವುದಕ್ಕೆ ಕಾರಣ ಇಷ್ಟೇ. ಭೂಕಂದಾಯ ವಿಧಿಸುವುದು ನಮ್ಮ ದೇಶದಲ್ಲಿದ್ದ ಹಳೇ ಕಂದಾಚಾರದ ಪದ್ಧತಿ. ಶಿವಪ್ಪನಾಯಕನ ಕಾಲದಲ್ಲಿ ಇದು ಬಂತು ಎಂದು ಹೇಳುತ್ತಾರೆ. ಭೂಮಿಯಿಂದ ಬರುವ ಆದಾಯದಲ್ಲಿ ನಾಲ್ಕನೆಯ ಒಂದು ಭಾಗ ಅಥವಾ ಐದನೆ ಒಂದು ಭಾಗ ತೆಗೆದುಕೊಳ್ಳುತ್ತಿದ್ದರು. ಒಂದೊಂದು ಕಡೆ ಒಂದೊಂದು ರೀತಿ ಇತ್ತು. ಶಾಸ್ತ್ರೀಯವಾದ ರೀತಿಯಲ್ಲಿ ತೆರಿಗೆ ವಿಧಿಸಿಲ್ಲದಿರುವಾಗ ಇಂದು ಶಾಸ್ತ್ರೀಯವಾಗಿ ವಿಧಿಸುವುದಾಗಿ ಹೇಳುತ್ತಿದ್ದಾರೆ ಇದರಿಂದ ಸರಕಾರದ ಖಜಾನೆಗೆ 125 ಕೋಟಿ ರೂಪಾಯಿ ಬರುತ್ತದೆ. ಹಿಂದೆ 5 ಕೋಟಿ ಮಾತ್ರ ಬರುತಿತ್ತು. ಅದರಿಂದ ರೈತರಿಗೆ ಬೇಕಾದ ಸೌಲಭ್ಯ ಒದಗಿಸುತ್ತಿದ್ದರು. ಆಗ ರೈತರ ಮೇಲೆ ಬೇರೆ ತೆರಿಗೆ ಹಾಕುತ್ತಿರಲಿಲ್ಲ. ಆದರೆ ಈ ದಿವಸ ಮಾರಾಟ ತೆರಿಗೆ, ಆದಾಯ ತೆರಿಗೆ, ಎಕ್ಸೈಜ್ ಡ್ಯೂಟಿ ಹೀಗೆ ಬೇರೆ ಬೇರೆ ತೆರಿಗೆಗಳನ್ನು ಹೇರಿ ಖಜಾನೆಗೆ 125 ಕೋಟಿ ತುಂಬುತ್ತಿದ್ದಾರೆ. ಇಷ್ಟು ಹೊರೆ ಹೇರಿದರೆ ರೈತನಿಗೆ ಹೆಚ್ಚು ಬೆಳೆ ತೆಗೆಯಲು ಉತ್ತೇಜನ ಕೊಟ್ಟಂತಾಗುವುದೇ ? 1965 ನೆಯ ಇಸವಿಯಲ್ಲಿ ಇಂಥ ಯೋಜನೆ ಮಾಡುವುದಂತೂ ಸರ್ವಥಾ ಸಾಧುವಲ್ಲ. ಖಂಡಿತವಾಗಿಯೂ ಯೋಚಿಸಿ ಭೂಕಂದಾಯವನ್ನು ರದ್ದು ಮಾಡಬೇಕಾಗಿತ್ತು. ಇವತ್ತು ಭೂಮಿಯಿಂದ ಉತ್ಪತ್ತಿಮಾಡುವ ಹತ್ತಿ, ಎಣ್ಣೆಬೀಜ, ತೆಂಗಿನಕಾಯಿ, ಹೊಗೆಸೊಪ್ಪು, ಸಕ್ಕರೆ ಹೀಗೆ ಯಾವುದನ್ನೇ ತೆಗೆದುಕೊಂಡರೂ ಕೂಡ ಅದರಿಂದ ಖಜಾನೆಗೆ ಹಣ ಬರುತ್ತಿದೆ. ಸಕ್ಕರೆ ಎಕ್ಸೈಜು ಡ್ಯೂಟಿ ಇದೆ, ಮಾರಾಟ ತೆರಿಗೆ ಇದೆ, ಎಣ್ಣೆಬೀಜದ ಮಾರಾಟದಿಂದ ಮಾರಾಟ ತೆರಿಗೆ, ಆದಾಯ ತೆರಿಗೆ ಬರುತ್ತದೆ. ಹೀಗೆ ಭೂ ಉತ್ಪತ್ತಿಯಿಂದ ಮತ್ತು ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳಿಂದ ಸರಕಾರದ ಆದಾಯ ನೂರುಮಡಿ ಹೆಚ್ಚಾಗಿದೆ. ಈ ದಿವಸ ಜನತೆಗೆ ಬೇಕಾದ ಅನ್ನ, ಬಟ್ಟೆ, ಎಣ್ಣೆಬೀಜ, ತೆಂಗಿನಕಾಯಿ ಮುಂತಾದುವುಗಳನ್ನು ಹೆಚ್ಚಾಗಿ ಬೆಳೆಯಲು ಪ್ರೋತ್ಸಾಹ ಕೊಡದೆ ಅವನ್ನು ಬೆಳೆಯುವವರಿಗೆ ಶಿಕ್ಷೆಮಾಡಲು ಹೊರಟಿದ್ದಾರೆ. ಯಾವ ದೇಶದಲ್ಲಿ ಅನ್ನದ ಹಾಹಾಕಾರವಿದೆ, ಅನ್ನ ದೊರಕುವುದು ಕಷ್ಟವಾಗಿ ಇತರ ದೇಶಗಳಿಂದ ಆಹಾರ ಸಾಮಗ್ರಿಗಳನ್ನು ತರಿಸಿಕೊಳ್ಳಬೇಕಾಗಿದೆ, ಅಲ್ಲಿ ಪ್ರೋತ್ಸಾಹ ಸಾಕಷ್ಟಿಲ್ಲ. ಅಮೇರಿಕಾದಿಂದ ಈಗ ಗೋಧಿ ತರಿಸಿಕೊಳ್ಳುವ ಸಲುವಾಗಿ 187 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹಾಗೆ ಕೊಡುವುದನ್ನು ತಪ್ಪಿಸಲು ನಮ್ಮ ರೈತರಿಗೆ ಹೆಚ್ಚಾಗಿ ಬೆಳೆಯಲು ಉತ್ತೇಜನ ದೊರೆಯುವಂತೆ ಕಂದಾಯ ಮಾಫಿ ಮಾಡಿ. ಹಾಗೆ ಮಾಡಿದರೆ ಅವರಿಗೆ ಹುಮ್ಮಸ್ಸು ಬಂದು ಹೆಚ್ಚು ಉತ್ಪತ್ತಿ ಮಾಡಲು ಅವಕಾಶವಾಗುತ್ತದೆ. ಹಿಂದೆ ಮೂರೂವರೆ ಕೋಟಿ ರೂಪಾಯಿ ಆದಾಯವಿತ್ತು, ಈಗ ಅದರ ಎರಡರಷ್ಟು ಜಾಸ್ತಿ ಹಾಕಿದರೆ 7 ಕೋಟಿ ರೂಪಾಯಿಯಾಗುತ್ತದೆ. ಅದೇನು ಹೆಚ್ಚಲ್ಲ ಎನ್ನುವ ರೀತಿಯಲ್ಲಿ ಕೃಷ್ಣಪ್ಪನವರು ವಾದ ಮಾಡುವುದಾದರೆ, ನೂರರಷ್ಟು ಕಂದಾಯ ಜಾಸ್ತಿಮಾಡಿ ಏನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. 40 ವರ್ಷಗಳ ಹಿಂದೆ ರೀಸರ್ವೆ ಆಗಿತ್ತು, ಈಚೆಗೆ ಆಗಿರಲಿಲ್ಲ. ಆದುದರಿಂದ ಬದಲಾವಣೆ ಮಾಡಬೇಕಾದ ಕಾಲ ಬಂದಿದೆ ಎಂದು ಹೇಳಿದರು. ಹಿಂದೆ ಕಂದಾಯವೊಂದೇ ದೇಶದ ಆದಾಯವಾಗಿತ್ತು. ಈ ದಿವಸ ಬೇರೆ ರೀತಿಯಲ್ಲಿ ತೆರಿಗೆಗಳನ್ನು ವಿಧಿಸುತ್ತಿರುವಾಗ ಕಂದಾಯವನ್ನು ಭೂಮಿಯ ಮೇಲೆ ಹೇರಿ ಇನ್ನೂ ಅದನ್ನು ಮುಂದುವರೆಸಿಕೊಂಡು ಬರುತ್ತಿರುವುದು ದೊಡ್ಡ ಪಾಪ. ಭೂಮಿಯ ಮೇಲೆ ಯಾವ ಆಧಾರದ ಮೇಲೆ ಕಂದಾಯ ಹಾಕುತ್ತಿದ್ದೀರಿ ? ಅದೊಂದು ವೃತ್ತಿ. ವ್ಯವಸಾಯ, ಕೈಗಾರಿಕೆ ಮುಂತಾದ ಯಾವ ವೃತ್ತಿ ಅಥವಾ ಉದ್ಯಮವನ್ನು ತೆಗೆದುಕೊಂಡರೂ ಕನಿಷ್ಠ ಆದಾಯವನ್ನು ಬಿಟ್ಟು ಹೆಚ್ಚು ಆದಾಯದ ಮೇಲೆ ತೆರಿಗೆ ಹಾಕುತ್ತಿದ್ದಾರೆ. ಹಾಗಿರುವಾಗ ಹೀಗೆ ಹೆಚ್ಚು ಭೂಕಂದಾಯವನ್ನು ಹಗಲಿರುಳೂ ದುಡಿಯುವ ರೈತನ ಮೇಲೆ ಹೇರಿದರೆ ಅವನು ಹೇಗೆ ಉತ್ಪತ್ತಿ ಜಾಸ್ತಿಮಾಡಬಲ್ಲ ? ಅವನ ಮೇಲೆ ತೆರಿಗೆ ಹೇರಬೇಕಾದರೆ ಕನಿಷ್ಠಮಿತಿಯನ್ನು ಬಿಟ್ಟು ಶಾಸ್ತ್ರೀಯ ರೀತಿ ಹಾಕಿದರೆ ಒಳ್ಳೆಯದು. ಅಣ್ಣ ತಮ್ಮಂದಿರ ಭೂಮಿಯಲ್ಲಿ ಒಂದೇ ರೀತಿಯ ಬೆಳೆ ಬರುವುದಿಲ್ಲ, ಉತ್ಪತ್ತಿ ಎಕರೆ ಎಕರೆಗೂ ವ್ಯತ್ಯಾಸವಾಗುತ್ತದೆ; ಒಂದೊಂದು ಜಮೀನಿಗೂ

ಬದಲಾಗುತ್ತದೆ, ಅದು ಜಮೀನಿಗೆ ಹಾಕುವ ಗೊಬ್ಬರ, ರೈತನ ಕಷ್ಟ, ಮುಂತಾದುವುಗಳ ಮೇಲೆ ಬದಲಾವಣೆಯಾಗುತ್ತದೆ. ಹಳೇಕಾಲದ ನಿಯಮದ ಪ್ರಕಾರ ಅಕ್ಕಪಕ್ಕದ ನಾಲ್ಕೈದು ತಾಲ್ಲೂಕುಗಳಿಗೆ ಒಂದೇ ರೀತಿ ಉತ್ಪತ್ತಿಯಿದೆ ಎಂದು ಪರಿಗಣಿಸಿ ಕಂದಾಯ ವಿಧಿಸುತ್ತಿದ್ದರು, ಈಗ ಹಾಗಿಲ್ಲ. ಭೂಮಿಯ ಉತ್ಪತ್ತಿಯಲ್ಲಿ ವ್ಯತ್ಯಾಸವಿದೆ, ಆದುದರಿಂದ ಎಲ್ಲಕ್ಕೂ ಒಂದೇ ರೀತಿಯ ಕಂದಾಯ ಎಂದು ಹೇಳಿ ವಿಧಿಸುವುದು ಸರಿಯಾಗಿ ಕಾಣುವುದಿಲ್ಲ. ಸರ್ವೆ ಮಾಡಿ ಒಂದು ಎಕರೆಯಲ್ಲಿ ಬೆಳೆ ತೆಗೆಯಲು ಖರ್ಚು ಎಷ್ಟಾಗುತ್ತದೆಂಬುದನ್ನು ಹೇಳಿದ್ದಾರೆ. ಸರ್ಕಾರದ ಅಧೀನದಲ್ಲಿ ಕೆಲವು ಫಾರಂಗಳಿವೆ. ಅವುಗಳ ಮೂಲಕ ಎಷ್ಟು ಎಕರೆ ವ್ಯವಸಾಯ ನಡೆಯುತ್ತಿದೆ, ಖರ್ಚೆಷ್ಟು, ಆದಾಯ ವೆಷ್ಟು ಎಂಬುದನ್ನು ಹೇಳಿಲ್ಲ. ಅದರಿಂದ ಬರುವ ಆದಾಯ ಕಡಿಮೆ, ನಷ್ಟವಾಗುತ್ತಿದೆ. ಈ ದಿವಸ ಒಂದೊಂದು ಹಳ್ಳಿಯಲ್ಲಿ ಇಷ್ಟು ಖರ್ಚಿದೆ ಎಂದು ಲೆಕ್ಕ ಹಾಕಿರುವುದು ಶಾಸ್ತ್ರೀಯವಾಗಿಲ್ಲ. ರೈತ ಬೆಳಗಿನಿಂದ ಸಾಯಂಕಾಲದವರೆಗೆ ಹೊಲದಲ್ಲಿ ಕೆಲಸ ಮಾಡುತ್ತಾನೆ. ಅವನ ಕೂಲಿ ಲೆಕ್ಕ ಹಾಕಿಲ್ಲ. ಹಾಗೆ ಲೆಕ್ಕ ಹಾಕಿದರೆ ರೈತನಿಂದ ತೆಗೆದುಕೊಂಡಿರುವ ಹಣವನ್ನು ವಾಪಸು ಕೊಡಬೇಕಾಗುತ್ತದೆ. 1952 ರಿಂದ 1957 ನೇ ಇಸವಿಯ ಧಾರಣೆ ಎಂದು ಇಲ್ಲಿ ಹೇಗೆ ತಗೆದುಕೊಂಡು ಇದ್ದೀರಿ? ಸರಾಸರಿ ಒಂದು ಸಾರಿ ಸರ್ವೆ ಸೆಟಲ್‌ಮೆಂಟು ಮಾಡಬೇಕಾದರೆ ಮೂವತ್ತು ವರ್ಷಕ್ಕೊಂದು ಸಾರಿ ಮಾಡಬೇಕಾಗಿತ್ತು. ಮೂವತ್ತು ವರ್ಷಗಳ ಸರಾಸರಿ ಎಂದರೆ 1927ರ ಅಥವಾ 1930ರ ಧಾರಣೆ ವಾಸಿಗಳ ಲೆಕ್ಕವನ್ನು ತಗೆದುಕೊಂಡು ಅದರಂತೆ ಕಂದಾಯವನ್ನು ಹಾಕಬೇಕಾಗಿತ್ತು. ಆದರೆ ಹಿಂದೆ ಎಲ್ಲೋ ಕೆಲವು ಭೂಮಿ ಪಾಳು ಬಿದ್ದಿದ್ದುದನ್ನು ರೈತ ಬಹಳ ಕಷ್ಟಪಟ್ಟು, ಅದಕ್ಕಾಗಿ ಹೆಚ್ಚು ಖರ್ಚು ಮಾಡಿ ಒಂದು ತೆಂಗಿನ ತೋಟವನ್ನು ಸ್ವಂತವಾಗಿ ಮಾಡುತ್ತಿದ್ದರೆ ಅವನನ್ನು ಹಿಂದೆ ಆ ರೀತಿ ಧಾರಣೆ ಇರಲಿಲ್ಲ, ಇವೊತ್ತು ಹೆಚ್ಚಾಗಿದೆ ಎಂದು ಅವರ ಮೇಲೆ ಹೊರೆಯನ್ನು ಜಾಸ್ತಿ ಮಾಡಿ ಕೊಡಬೇಕೆನುವಂತೆ ಇದರಲ್ಲಿ ನಿಗದಿ ಮಾಡಿದ್ದೀರಿ. ಇದು ಖಂಡಿತವಾಗಿಯೂ ನ್ಯಾಯವಾದ ಪರಿಸ್ಥಿತಿಯನ್ನು ನೋಡಿಕೊಂಡು ನಿಗದಿ ಮಾಡಿರುವುದಿಲ್ಲ ಎಂದು ನಿಮ್ಮ ಮುಂದೆ ಇಲ್ಲಿ ಹೇಳಬೇಕಾಗಿದೆ. ಈ ನಿರ್ಣಯದಲ್ಲಿ ಇನ್ನೊಂದು ವಿಚಾರವನ್ನು ಹೇಳಿದ್ದೀರಿ. ಅದು ನಾಲ್ಕೈದು ತಾಲ್ಲೂಕುಗಳನ್ನು ಸೇರಿಸಿಕೊಂಡು ಜೋನು 'ಎ', ಜೋನು 'ಬಿ', ಗ್ರೇಡು ಒಂದು, ಗ್ರೇಡು ಎರಡು ಎಂದು ಗ್ರೂಪುಗಳನ್ನು ಮಾಡಿದ್ದೀರಿ. ಆದರೆ ಹಳೆಯ ಕಾನೂನು ಪ್ರಕಾರ ವಿಲೇಜು ಒಂದು ಯೂನಿಟ್ಟು ಎಂದು ಮಾಡಿಕೊಂಡು ಅಲ್ಲಿಯ ಭೂಮಿಯ ಸಾರವನ್ನು ಪರೀಕ್ಷೆಮಾಡಿ ನಿಗದಿ ಮಾಡಿಲ್ಲ. ಹಳ್ಳಿಗಳಲ್ಲಿರುವ ಭೂಮಿಯ ಪರಿಸ್ಥಿತಿಯನ್ನು ನೋಡಿಕೊಳ್ಳದೇ 5-6 ತಾಲ್ಲೂಕುಗಳನ್ನು ಒಂದು ಗ್ರೂಪಾಗಿ ಇಲ್ಲಿ ಮಾಡಿರುವುದು ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಸರಿಯಾಗಿ ಮಾಡಿಲ್ಲ ಎಂದು ಹೇಳಬೇಕಾಗಿದೆ. ಸರ್ವೆ ಸೆಟಲ್‌ಮೆಂಟು ರಿಟರ್ನು ಇನ್ನೂ ತಯಾರಾಗಿ ಬಂದಿಲ್ಲ. ಅದು ಬಂದಮೇಲೆ ಯಾವ ರೀತಿಯಾಗುತ್ತದೆ ಎನ್ನುವುದನ್ನೆಲ್ಲಾ ಈಗ ಸುಮಾರು ಒಂದೂವರೆ ಗಂಟೆಗಳಕಾಲ ಮಾತನಾಡುತ್ತ ನಮ್ಮ ಮಂತ್ರಿಗಳು ಇಲ್ಲಿ ವಿವರಿಸಿದರು. ಲ್ಯಾಂಡು ರೆವೆನ್ಯೂ ಆಕ್ಟು ಮತ್ತು ಅದರ ನಿಬಂಧನೆಗಳನ್ನನುಸರಿಸಿ ಅಧಿಕಾರಿಗಳು ಸರಿಯಾದ ರಿಟರ್ನುಗಳನ್ನು ತಯಾರು ಮಾಡಿದ್ದಾರೆ ಎಂದು ಇಲ್ಲಿ ಹೇಳುತ್ತಿಲ್ಲ. ನೀವು ಈಗ ಸರ್ವೆ ಸೆಟಲ್‌ಮೆಂಟ್ ರಿಪೋರ್ಟು ಎಂದು ತಯಾರು ಮಾಡುವ ಕಾಲದಲ್ಲಿ ಹಳ್ಳಿಯಲ್ಲಿರುವ ಭೂಮಿಯ ಸಾರವನ್ನು ಪರೀಕ್ಷೆ ಮಾಡಲು ಸಾಯಿಲ್ ರೀಸರ್ಚ್ ಮತ್ತು ಸಾಯಿಲ್ ಸರ್ವೇ ಮಾಡಿಲ್ಲ. ದೇಶದ ಎಲ್ಲೋ ಒಂದು ಕಡೆ ಹಾಸನ ಅಥವಾ ಹೊಳೆನರಸೀಪುರ ಇಲ್ಲಿ ಕೆಲವು ಹಳ್ಳಿಗಳಲ್ಲಿರುವ ಭೂಮಿಯ ಸಾರವನ್ನು ಪರೀಕ್ಷೆ ಮಾಡಿರಬಹುದು. ಆದರೆ ಎಲ್ಲ ಭಾಗದಲ್ಲಿರುವ ಒಂದೊಂದು ಹಳ್ಳಿಯಲ್ಲೂ ಇರುವ ಭೂಮಿಯ ಸಾರವನ್ನು ಪರೀಕ್ಷೆ ಮಾಡಿಲ್ಲ. ಈ ಸಾರಿ ಸರ್ವೆ ಸೆಟಲ್‌ಮೆಂಟು ಮಾಡುವ ಅಧಿಕಾರಿಗಳು ಎಷ್ಟು ಸಾರಿ ಇಂತಹ ಭೂಮಿಯ ಸಾರವನ್ನು ಪರೀಕ್ಷೆ ಮಾಡಿ ಅವರು ರಿಪೋರ್ಟು ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಇಲ್ಲಿ ಏನನ್ನೂ ಹೇಳಲಿಲ್ಲ. ಏನೋ ನೂರು ವರ್ಷಕ್ಕೆ ಹಿಂದೆ ಯಾವ ಪರಿಸ್ಥಿತಿಯಲ್ಲಿತ್ತೋ ಅದೇ ಪರಿಸ್ಥಿತಿ ಇನ್ನೂ ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ಹೇಳಿದರೆ ಅದು ಖಂಡಿತವಾಗಿ ನ್ಯಾಯವಾದುದಲ್ಲ. ಇವೊತ್ತು ಅನೇಕ ಭೂಮಿಗಳು ನೂರು ವರ್ಷಕ್ಕೆ ಹಿಂದೆ ಚೆನ್ನಾಗಿದ್ದದ್ದು ಈಗ ಪಾಳು ಬಿದ್ದಿದೆ. ಸಾಯಿಲ್ ಎರೋಷನ್ನು ಇತ್ಯಾದಿ ಕಾರಣಗಳಿಂದಾಗಿ ಹಿಂದೆ ಭೂಮಿಯಲ್ಲಿ ಏನು ಸಾರವಿತ್ತೋ ಅದನ್ನು ಈಗ ಕಳೆದುಕೊಂಡು ಆ ಭೂಮಿ ಇವೊತ್ತು ಬಹಳ ಹೀನ ಸ್ಥಿತಿಯಲ್ಲಿದೆ. ಯಾರಾದರೂ ಇವೊತ್ತು ಇಂತಹ ಪಾಳು ಭೂಮಿಯನ್ನು ಇಟ್ಟುಕೊಂಡು ಹಾಳು ಮಾಡಿರುವುದನ್ನು ಪುನಃ ಸ್ವಂತ ಶ್ರಮದಿಂದ ಅವನ್ನು ತೆಂಗು ಅಥವಾ ಅಡಕೆ ತೋಟವನ್ನಾಗಿ ಮಾಡಿಕೊಂಡಿದ್ದರೆ ಅದನ್ನು ಇಲ್ಲಿ ಕ್ಲಾಸಿಫಿಕೇಷನ್ನು ಮಾಡುವಾಗ 'ಗಾರ್ಡನ್' ಎಂದು ಬರೆದಿರುತ್ತಾರೆ. ಸಾವಿರಾರು ರೂಪಾಯಿಗಳಷ್ಟು ವೆಚ್ಚ ಮಾಡಿಕೊಂಡು ಅದಕ್ಕೆ ಬೇಕಾದ ಬಂಡುಗಳನ್ನು ಕಟ್ಟಿಕೊಂಡು ತನ್ನ ಸ್ವಂತ ಖರ್ಚಿನಿಂದ ಪಾಳು ಭೂಮಿಯನ್ನು ಉತ್ತಮವಾದ ರೀತಿಯಲ್ಲಿ ಮಾಡಲು ಅವನಿಗೇನಾದರೂ ತಾವು ರಿಮಿಷನ್ನು

(ಶ್ರೀ ಎಸ್. ಶಿವಪ್ಪ)

ಕೊಡುತ್ತೀರಾ ಎಂದರೆ ಅದರ ಬಗ್ಗೆ ಇಲ್ಲಿ ಏನೂ ಹೇಳಲಿಲ್ಲ. ಇದರಲ್ಲಿ ನಿಮ್ಮ ಅಡ್ಮಿನಿಸ್ಟ್ರೇಟಿವ್ ಮೆಷನರಿಗಳನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಇಲ್ಲಿ ಕಂದಾಯವನ್ನು ಜಾಸ್ತಿ ಮಾಡಿ ಎಂದು ಹೇಳು ವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಂತ ಖರ್ಚಿನಿಂದ ತೆಂಗಿನ ತೋಟ ಎಂದು ಮಾಡಿದ್ದರೆ ಅದನ್ನು ತೋಟದ ವರ್ಗಕ್ಕೆ ಸೇರಿಸಬೇಕಾಗುತ್ತದೆ. ಅದಕ್ಕೆ ತಕ್ಕಂಥ ಕಂದಾಯ ಹಾಕುತ್ತಾರೆ.

ಶ್ರೀ ಎಸ್. ಶಿವಪ್ಪ.—ದೇಶದ ರೈತನ ಹಿತದೃಷ್ಟಿಯಿಂದ ಭೂಮಿಯ ಸಾರವನ್ನು ಜಾಸ್ತಿ ಮಾಡಿಕೊಂಡು ಡ್ರೈ ಆಗಿದ್ದ ಲ್ಯಾಂಡನ್ನು ಈಗ ವೆಟ್ ಲ್ಯಾಂಡಾಗಿ ಮಾಡಿದ್ದಾರೆಂದು ಅಂತಹವರಿಗೆ ಕಂದಾಯವನ್ನು ಜಾಸ್ತಿ ಮಾಡುತ್ತೇವೆ ಎಂದು ಹೇಳುವುದು ಖಂಡಿತ ಸರಕಾರದ ಉತ್ತಮವಾದ ನೀತಿಯಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತರಷ್ಟು ಜನ ರೈತಾಪಿ ಜನರು. ಎಂದರೆ ಸುಮಾರು ಒಂದು ಕೋಟಿ ಅರವತ್ತು ಲಕ್ಷ ಜನತೆಯ ಮೇಲೆ ಇಂತಹ ಕಂದಾಯದ ಹೊರೆಯನ್ನು ಜಾಸ್ತಿ ಮಾಡಿ ಹೊರಿಸುತ್ತಿದ್ದೀರಿ. ನಮ್ಮ ದೇಶದಲ್ಲಿರುವ ರೈತರು ಇದನ್ನು ಹೊರಲಾರದ ಸ್ಥಿತಿಯಲ್ಲಿದ್ದಾರೆ. ಇದು ಹೇಗಿದೆ ಎಂದರೆ ಒಬ್ಬ ರೈತನ ಮೇಲೆ ಸುಮಾರು ತಲೆಗಂದಾಯ ಬಿದ್ದ ಹಾಗಾಗುತ್ತದೆ. ಇಂತಹ ಮೂರು ರೂಪಾಯಿಗಳಷ್ಟು ತಲೆಗಂದಾಯವನ್ನು ತಾವು ಹಾಕುವುದು ಸರಿಯೇ ಎಂದು ನಾನು ಸರ್ಕಾರವನ್ನು ಕೇಳಬೇಕಾಗಿದೆ. ಮೂರುವರೆ ಕೋಟಿ ಯಷ್ಟು ಹಿಂದೆ ಕಂದಾಯ ಬರುತ್ತಿತ್ತು. ಈಗ ಹೆಚ್ಚು ಮಾಡಿರುವಂತೆ ಇನ್ನೂ ಹೆಚ್ಚಿಗೆ ಬಂದರೂ ಕೂಡ ಅದರಲ್ಲಿ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಸುಮಾರು ಶೇಕಡ ಅರವತ್ತರಷ್ಟು ಭಾಗವನ್ನು ಹಳ್ಳಿಯ ಜನರು ಉಪಯೋಗಕ್ಕಾಗಿಯೇ ಕೊಡುತ್ತೇವೆಂದು ಹೇಳುತ್ತಾರೆ. ಸುಮಾರು ಒಂದು ಕೋಟಿ ಇಪ್ಪತ್ತೈದು ಲಕ್ಷದಷ್ಟು ಹಣವನ್ನು ತಾವುಗಳು ವಾಸ ಮಾಡುವ ಭವನಗಳಿಗೆ, ಹಾಗೂ ಇತರ ಭೋಗಗಳಿಗೋಸ್ಕರ ಬಟ್ಟೆಟ್ಟಿನಿಂದ ಪಡೆಯುತ್ತಿದ್ದೀರಿ. ಹಾಗೆ ವಸೂಲು ಮಾಡಿ, ಹಾಕಿಕೊಳ್ಳುವ ಬಟ್ಟೆಗಳ ಮೇಲೆ ಸುಂಕ, ಎಣ್ಣೆಯ ಮೇಲೆ ಸುಂಕ, ನೀರಿನ ಮೇಲೆ ಸುಂಕ, ವಾಸಮಾಡುವ ಮನೆಗಳ ಮೇಲೆ ಸುಂಕ ಇದನ್ನೆಲ್ಲಾ ವಸೂಲು ಮಾಡುತ್ತೀರಿ. ಇದಕ್ಕಾಗಿ ಸುಮಾರು ಒಂದು ಕೋಟಿ ಇಪ್ಪತ್ತೈದು ಲಕ್ಷದಷ್ಟು ಖರ್ಚು ಮಾಡುತ್ತೇವೆಂದು ಹೇಳುತ್ತೀರಿ ? ರೈತರ ಮೇಲೆ ಹೊರೆ ಜಾಸ್ತಿಯಾಗುತ್ತದೆ ಕಂದಾಯ ಜಾಸ್ತಿ ಮಾಡಬೇಡಿ ಎಂದರೆ ನೀವು ಕೊಡುವ ದುಡ್ಡನ್ನೆಲ್ಲಾ ನಿಮ್ಮ ಪಂಚಾಯಿತಿಗಳಿಗೇ ಹಾಗೂ ತಾಲ್ಲೂಕಾ ಬೋರ್ಡುಗಳಿಗೇ ಕೊಡುತ್ತೇವೆಂದು ಹೇಳಿದರೆ, ಇದು ಹೇಗಿದೆ ಎಂದರೆ ಯಾರು ಯಾರಿಂದಲೋ ದಾನವಾಗಿ ಪಡೆದು ಯಾರಿಗೋ ದಾನ ಮಾಡಿದರು ಎನ್ನುವಂತಾಗುತ್ತದೆ. ಸರಕಾರ ತಾನು ಮಾಡುತ್ತಿರುವ ಜವಾಬುದಾರಿಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಇಂತಹ ಒಂದು ಉಪಾಯವನ್ನು ಹೂಡಿ ಕಂದಾಯ ಜಾಸ್ತಿ ಮಾಡುತ್ತಿದ್ದಾರೆ. ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳಷ್ಟು ಹಣವನ್ನು ದೇಶದ ಎಲ್ಲ ಜನತೆಗೂ ಅನುಕೂಲ ಮಾಡುವುದಕ್ಕಾಗಿ ಈಗಿರುವ ಭೂಕಂದಾಯವನ್ನು ಜಾಸ್ತಿ ಮಾಡಿ ಜನತೆಯ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸುತ್ತಿದ್ದಾರೆ. ಇದು ಖಂಡಿತ ರೈತರಿಗೆ ಮೋಸ ಮಾಡುವುದಕ್ಕಾಗಿ ಇಂತಹ ಒಂದು ಕುತಂತ್ರ ಮಾಡುತ್ತಿದ್ದಾರೆ. ಇದರಲ್ಲಿ ನಮ್ಮ ಜವಾಬು ದಾರಿ ಏನೂ ಇಲ್ಲ ಎಂದು ತಮ್ಮ ಜವಾಬುದಾರಿಯನ್ನು ಪಂಚಾಯಿತಿಗಳ ಮೇಲೆ, ತಾಲ್ಲೂಕಾ ಬೋರ್ಡುಗಳ ಮೇಲೆ ಹೊರಿಸಲು ಹೊರಟಿದ್ದಾರೆ. ಇದಕ್ಕಾಗಿ ನೀವು ಜಾಸ್ತಿ ಕಂದಾಯ ಕೊಡಿ ನಿಮಗೆ ಬೇಕಾಗುವ ಎಲ್ಲ ಸೌಕರ್ಯಗಳನ್ನೂ ಮಾಡಿಕೊಡುತ್ತೇವೆ ಎಂದು ಬೇರೆ ಕಡೆ ತಾಲ್ಲೂಕಾ ಡೆವಲಪ್ಮೆಂಟು ಕಮಿಟಿ ಇತ್ಯಾದಿಗಳನ್ನು ಮಾಡಿದ್ದೇವೆಂದು ಹೇಳುತ್ತ ಕಂದಾಯವನ್ನು ಜಾಸ್ತಿ ಮಾಡುತ್ತಲಿದ್ದಾರೆ. ಇದು ಹಳ್ಳಿಯಲ್ಲಿರುವ ಜನರಿಗೆ ಮೋಸ ಮಾಡುವುದಕ್ಕಾಗಿ ಇಂತಹ ಸರ್ವೆ ಸೆಟಲ್‌ಮೆಂಟನ್ನು ಜಾರಿಗೆ ತರುತ್ತಿದ್ದೇವೆಂದು ಇಲ್ಲಿ ಹೇಳುತ್ತ ಬರುತ್ತಿದ್ದಾರೆ.

ಸ್ವಾಮಿ, ಇವತ್ತು ಭೂಕಂದಾಯವನ್ನು ಸೇಕಡ 100 ರಷ್ಟು ಜಾಸ್ತಿ ಮಾಡಿದ್ದೇವೆಂದು ಹೇಳಿ ದ್ದಾರೆ. ಆ ರೀತಿ 100 ರಷ್ಟು ಜಾಸ್ತಿ ಮಾಡುವುದಕ್ಕೆ ಇವರಿಗೇನು ಹಕ್ಕು ಇದೆ? 1962 ನೇ ಇಸವಿಯಲ್ಲಿ ಚುನಾವಣೆ ಘೋಷಣೆಯ ಸಂದರ್ಭದಲ್ಲಿ ರೈತರ ಹತ್ತಿರ ಹೋದಾಗ ಮುಂದೆ ಕಂದಾಯ ಜಾಸ್ತಿ ಮಾಡುತ್ತೇವೆಂದು ಇವರು ಹೇಳಬೇಕಾಗಿತ್ತು. ಯಾರ ಓಟಿನ ಪ್ರಬಲ ಶಕ್ತಿ ಯಿಂದ ಇವರು ಇಲ್ಲಿಗೆ ಬಂದಿದ್ದಾರೋ.........

ಶ್ರೀ ಎಂ. ಸಿ. ಬಸಪ್ಪ.—ಸರ್ವೆ ಸೆಟಲ್‌ಮೆಂಟ್ ರೂಲ್ಸ್ ಪ್ರಕಾರ ಮಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಇವರು ಇಲ್ಲಿ ಹೇಳುವ ಮಾತನ್ನು ಅಲ್ಲಿ ಅವರ ಹತ್ತಿರ ಹೇಳಬೇಕಾಗಿತ್ತು. ರೈತರ ಹತ್ತಿರ ಹೇಳತಕ್ಕದ್ದೇ ಒಂದು ಮಾತು, ಈ ಶಾಸನ ಸಭೆಯಲ್ಲಿ ಹೇಳುವುದೇ ಒಂದು ಮಾತು. ಈ ರೀತಿ ಇವರು ಮೋಸದ ಮಾತನ್ನು ಇಲ್ಲಿ ಹೇಳುವುದು ಬೇಡ.

ಶ್ರೀ ಎಂ. ಸಿ. ಬಸಪ್ಪ.—ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ 30 ವರ್ಷಗಳಿಗೊಂದು ಸಾರಿ ಈ ಸೆಟಲ್‌ಮೆಂಟ್ ರಿವ್ಯೂ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಒಂದು ಹೊಸ ಮಾತನ್ನು ಶ್ರೀಮಾನ್ ಕೃಷ್ಣಪ್ಪನವರು ಹೇಳುತ್ತಿದ್ದಾರೆ. ಅವರು ಮುಳುಬಾಗಿಲು ತಾಲ್ಲೂಕಾದ ತಮ್ಮ ಕ್ಷೇತ್ರಕ್ಕೆ ಇವತ್ತು ರಾಜೀನಾಮೆ ಕೊಟ್ಟಿದ್ದಾರೆ. ಅದಕ್ಕಾಗಿಯೇ ಕಂದಾಯ ಜಾಸ್ತಿ ಮಾಡುವುದಕ್ಕೆ ಅವರು ತಮ್ಮ ಒಪ್ಪಿಗೆಯನ್ನು ಇತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನೇನು ಮುಳುಬಾಗಿಲು ತಾಲ್ಲೂಕಿನಿಂದ ಆರಿಸಿ ಬಂದಿಲ್ಲ.

ಶ್ರೀ ಎಸ್. ಶಿವಪ್ಪ.—ಅದೇ ಇವರಿಗೊಂದು ಸೌಭಾಗ್ಯ. ಇವರು ತಮ್ಮ ಚುನಾವಣಾ ಕ್ಷೇತ್ರವನ್ನು ಬಿಟ್ಟು ಬೇರೆ ಕಡೆಯಿಂದ ಆರಿಸಿ ಬಂದಿದ್ದಾರೆ. ಅವರ ತಾಲ್ಲೂಕಿನ ರೈತರೇನೂ ಬುದ್ಧಿವಂತರಲ್ಲದೆ ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ತಾಲ್ಲೂಕಿನ ರೈತರು ದಡ್ಡರಲ್ಲ.

ಶ್ರೀ ಎಸ್. ಶಿವಪ್ಪ.—ಬಹಳ ಸಂತೋಷ. ದಡ್ಡರಾಗಿದ್ದರೆ ಇಷ್ಟು ವರ್ಷ ಇವರು ಇಲ್ಲಿ ಹೇಗೆ ಇರುತ್ತಿದ್ದರು? ನಿಜವಾಗಿ ರೈತರು ಎಚ್ಚರವಾಗಿದ್ದಿದ್ದರೆ ಇವರು ಖಂಡಿತವಾಗಿ ಇಷ್ಟು ವರ್ಷಗಳ ಕಾಲ ಇರುತ್ತಿರಲಿಲ್ಲ. ಅವರು ಏನು ತಿಳಿದುಕೊಂಡಿದ್ದಾರೆಂದರೆ, ರೈತರು ದಡ್ಡರಲ್ಲವೆಂದು ಮಾತ್ರ ನಾನೂ ಸಹ ಅದೇ ರೀತಿಯಲ್ಲಿ ತಿಳಿದುಕೊಂಡಿದ್ದೇನೆ. ಈಗ ರೈತರು ಎಚ್ಚೆತ್ತಿದ್ದಾರೆ. ಅವರು ಕೆಲಕಾಲ ಎಲ್ಲಾ ರೈತರನ್ನು ಮೋಸ ಮಾಡಬಹುದು. ಆದರೆ ಸದಾ ಕಾಲದಲ್ಲಿಯೂ ಈ ತರಹ ಸುಳ್ಳು ಹೇಳಿ ಇಷ್ಟ ಬಂದಂತೆ ತಮಗೆ ಬೇಕಾದವರನ್ನು ನೇಮಿಸುವ ಕಾಲ ಹೊರಟು ಹೋಗಿದೆ. ಮೈಸೂರಿನ ಖಜಾನೆಗೆ ಹೋಗತಕ್ಕ 125 ಕೋಟಿ ರೂಪಾಯಿಗಳ ಪೈಕಿ ರೈತರಿಂದ ಎಷ್ಟು ಹಣ ಬೊಕ್ಕಸಕ್ಕೆ ಸೇರುತ್ತದೆಂಬುದನ್ನು ಪ್ರತಿಯೊಬ್ಬ ರೈತನೂ ಈಗ ಯೋಚಿಸುತ್ತಿದ್ದಾನೆ. ರೈತನಾದವನು ತನ್ನ ಮೇಲೆ ಎರಡು ತರಹ ಕಂದಾಯಗಳನ್ನು ಏಕೆ ಹಾಕುತಿದ್ದಾರೆ ಎಂದು ಕೇಳುವ ಪರಿಸ್ಥಿತಿ ಈಗ ಬಂದಿದೆ. ಅವನೂ ಸಹ ಬೇರೆ ಜನಗಳು ಕೊಡುತ್ತಿರುವ ಹಾಗೆ ಸೇಲ್ಸ್ ಟ್ಯಾಕ್ಸ್ ಆಕ್ಟ್ರಾಯಿ, ಇನ್ನೂ ಇತರ ಬೇರೆ ಬೇರೆ ತೆರಿಗೆಗಳನ್ನೂ ಕೂಡ ಕೊಡುತ್ತಿದ್ದಾನೆ. ಅದರ ಜೊತೆಗೆ ಈಗ ಇದು ಬೇರೆ ಕಂದಾಯವನ್ನು ಅವನ ಮೇಲೆ ಹಾಕುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈಗಿನ ಲ್ಯಾಂಡ್ ರೆವಿನ್ಯೂ ಏನಿದೆ ಇದು ಹಳೆಯ ಕಾಲದ ನೀತಿ. ಈ ಒಂದು ನಿರ್ಣಯವನ್ನು ಜಾರಿಗೆ ತರುವುದಕ್ಕೆ ಸಾಹಸ ಮಾಡುವುದು ಸರಿಯಲ್ಲ. ಈಗಿನ ಭೂಕಂದಾಯವನ್ನು ರದ್ದು ಮಾಡಬೇಕು. ಏಕೆಂದರೆ, ಭೂ ಕಂದಾಯದಿಂದ ಬರತಕ್ಕ ಆದಾಯ ಕೇವಲ 3½ ಕೋಟಿ ರೂಪಾಯಿಗಳು. ಇದು ಬಹಳ ಹಳೆಯ ಕಾಲದಿಂದ ಬಂದಿರತಕ್ಕ ಪದ್ಧತಿ ಪ್ರಕಾರ ಇರುವ ನೀತಿ. 3½ ಕೋಟಿ ರೂಪಾಯಿಗಳನ್ನು ಬೇರೆ ವಿಧಾನದಲ್ಲಿ ತರುವುದಕ್ಕೆ ಏರ್ಪಾಡು ಮಾಡೋಣ. ಈಗ ಈ ಭೂಕಂದಾಯವನ್ನು ರದ್ದು ಮಾಡಿ ಭೂಮಿಯ ಉತ್ಪತ್ತಿಯ ಆಧಾರದ ಮೇಲೆ ತೆರಿಗೆಯನ್ನು ಹಾಕುವ ಒಂದು ಹೊಸ ವಿಧಾನವನ್ನು ಹುಡುಕೋಣ. ಬೇರೆ ರೀತಿಯಿಂದ ಖಜಾನೆಗೆ ಬರತಕ್ಕ ಉತ್ಪತ್ತಿಯನ್ನು ಹೆಚ್ಚಿಸೋಣ. ಆದರೆ ಎಲ್ಲರೂ ಭೂಕಂದಾಯ ಕೊಡಬೇಕೆಂದರೆ ನಾನು ಒಪ್ಪುವುದಿಲ್ಲ. ದೇಶದಲ್ಲಿ ಈಗ ಈ ಭೂಕಂದಾಯವನ್ನು ವಜಾ ಮಾಡುವ ಕಾಲ ಬಂದಿದೆ. ನಾವು ಅವನ್ನು ಆ ದಿಶೆಯಿಂದ ಯೋಚನೆ ಮಾಡಬೇಕು. ಈಗ ಎಷ್ಟರ ಮಟ್ಟಿಗೆ ಭೂಮಿಯ ಉತ್ಪತ್ತಿಯ ಮೇಲೆ ತೆರಿಗೆ ಹಾಕಬೇಕು, ಎಷ್ಟು ಪರ್ಸಂಟೇಜ್ ಜಾಸ್ತಿ ಮಾಡಬೇಕೆಂಬುದು ಮುಖ್ಯ. ಇವತ್ತಿನ ದಿವಸ ಸರ್ವೆ ಸೆಟಲ್‌ಮೆಂಟ್ ವರದಿ ಏನಿದೆ, ಅದು ಅಶಾಸ್ತ್ರೀಯವಾಗಿದೆ ಮುಖ್ಯವಾಗಿ. ಈ ಭೂಕಂದಾಯ ವಜಾ ಆಗಬೇಕು. ಆದ್ದರಿಂದ ಈ ಭೂಕಂದಾಯವನ್ನು ಪುನರ್ವಿಮರ್ಶೆ ಮಾಡತಕ್ಕ ಯೋಚನೆಯನ್ನು ಬಿಟ್ಟು ಈಗಿರತಕ್ಕ ಭೂಕಂದಾಯವನ್ನು ವಜಾ ಮಾಡಬೇಕು. ಅದರ ಬದಲು ಯಾವರೀತಿ ಅಗ್ರಿಕಲ್ ಚರಲ್‌ಇನ್‌ಕಂ ಟ್ಯಾಕ್ಸ್ ಹಾಕಿದಾರೋ, ಆ ರೀತಿ ಭೂಮಿಯ ಉತ್ಪತ್ತಿಯ ಮೇಲೆ ಹೆಚ್ಚು ತೆರಿಗೆಯನ್ನು ಹಾಕುವುದು ಒಳ್ಳೆಯದು. ಬೇರೆ ಉದ್ಯಮಗಳಲ್ಲಿ ಯಾವ ರೀತಿ ಕಂದಾಯ ಕೊಡುತ್ತಾರೋ, ಅದೇ ರೀತಿಯಲ್ಲಿ ಭೂಮಿಯ ಉತ್ಪತ್ತಿಯ ಮೇಲೆ ಹೆಚ್ಚಿನ ವರಮಾನ್ಯ ತೆಗೆದುಕೊಂಡರೆ ವರಮಾನ ತೆರಿಗೆ ಹಾಕಿ, ಭೂಕಂದಾಯ ವಜಾ ಮಾಡುವ ಕಾಲ ಈಗ ಹತ್ತಿರ ಬಂದಿದೆ. ಈಗ ಸರ್ಕಾರದವರು ಅದನ್ನು ಯೋಚನೆ ಮಾಡಿ ಭೂಕಂದಾಯ ಪುನರ್ವಿಮರ್ಶೆ ಮಾಡತಕ್ಕ ಅದರಲ್ಲೂ ಅದನ್ನು ಹೆಚ್ಚು ಮಾಡತಕ್ಕ ಅಥವಾ ಕಡಿಮೆ ಮಾಡತಕ್ಕ ಯೋಚನೆ ಮಾಡುವ ಕಾಲವೂ ಸಹ ಮುಗಿದಿದೆ. ಇನ್ನು ಭೂಕಂದಾಯದ ವಿಚಾರವಾಗಿ ನಮ್ಮ ಮಾನ ಕಂದಾಯ ಮಂತ್ರಿಗಳು ದೀರ್ಘ ಕಾಲ ಭಾಷಣ ಮಾಡಿ ಏತಕ್ಕೋಸ್ಕರ ಇಲ್ಲ ಅದನ್ನು ಹೆಚ್ಚು ಮಾಡಿದ್ದೇನೆಂದು ಈ ಸಭೆಯ ಮುಂದೆ ಒಂದು ನಿರ್ಣಯವನ್ನು ಇಟ್ಟಿದ್ದಾರೋ ನನಗೆ ಗೊತ್ತಿಲ್ಲ. ಆದ್ದರಿಂದ ಕಂದಾಯ ಮಂತ್ರಿ

(ಶ್ರೀ ಎಸ್. ಶಿವಪ್ಪ)

ಗಳು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಈ ದೇಶದಲ್ಲಿ ನನ್ನ ಮಂತ್ರಿತ್ವ ಕಾಲದಲ್ಲಿ ಈ ಭೂಕಂದಾಯವನ್ನು ವಜಾ ಮಾಡತಕ್ಕ ಆಶ್ವಾಸನೆಯನ್ನು ಕೊಟ್ಟು ಅದಕ್ಕೆ ಬದಲಾಗಿ ಒಂದು ಹೊಸ ತರಹ ಕಂದಾಯವನ್ನು ಹಾಕಿದ್ದೇನೆಂಬುದಾಗಿ ಶ್ರೀಮಾನ್ ಕೃಷ್ಣಪ್ಪನವರು ಏತಕ್ಕಾಗಿ ತೋರಿಸಿಕೊಡಬಾರದು ಎಂಬುದಾಗಿ ನಾನು ಕೇಳುತ್ತೇನೆ. ದೇಶದಲ್ಲಿ ಮುಖ್ಯವಾಗಿ ಒಂದು ಒಳ್ಳೆಯ ತೆರಿಗೆಯ ನೀತಿಯನ್ನು ನಿರೂಪಿಸಿ ಹೊಸ ರೀತಿಯ ಕಂದಾಯವನ್ನು ಹಾಕಿದ ಹಾಗಾಗುತ್ತದೆ. ಅದು ಬಿಟ್ಟು ಹಳೆಯ ಕಾಲದ ಪದ್ಧತಿಯನ್ನು ಇನ್ನೂ ಮುಂದುವರಿಸುವುದು ಸರಿಯಲ್ಲ. ಒಂದು ಶಾಸ್ತ್ರೀಯವಾದ ಪದ್ಧತಿಯನ್ನು ಜಾರಿಗೆ ತರಬೇಕು. ಏಕೆಂದರೆ, ಈಗಿನ ತೆರಿಗೆಯ ನೀತಿಗೂ ಆಗಿನ ತೆರಿಗೆಯ ನೀತಿಗೂ ಸರಿಯಾಗಿ ಹೊಂದುವುದಿಲ್ಲ. ಆದ್ದರಿಂದ ಭೂಕಂದಾಯವನ್ನು ಖಂಡಿತ ವಜಾ ಮಾಡಬೇಕು. ಈ ನಿರ್ಣಯವನ್ನು ಕೂಡಲೇ ಅವರು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳಿ ನಾನು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದಿರುವ ಸೆಟಲ್‌ಮೆಂಟ್ ವರದಿಯ ಪರವಾದ ಸರ್ಕಾರೀ ನಿರ್ಣಯದ ವಿಚಾರವಾಗಿ ನಾನು ಕೆಲವು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಈ ನಿರ್ಣಯವನ್ನು ಸಮರ್ಥಿಸುತ್ತಾ ಅದರಲ್ಲಿ ಕೆಲವು ಬದಲಾವಣೆಗಳು ಆಗುವುದು ಅತ್ಯವಶ್ಯಕವೆಂಬುದಾಗಿ ನಾನು ಹೇಳಲು ಇಚ್ಛೆಪಡುತ್ತೇನೆ. ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಒಂದು ರೂಪಾಯಿಗೆ ಒಂದು ಆಣೆ ಕಂದಾಯವನ್ನು ವಿಧಿಸುವ ಒಂದು ವಿಚಾರದಿಂದ ಇಷ್ಟು ದೊಡ್ಡ ಪರಿಣಾಮ ನಮ್ಮೆಲ್ಲರ ಮೇಲೆ ಹಾಗೂ ನಮ್ಮ ಜನತೆಯ ಮೇಲೆ ಉಂಟಾಗುತ್ತದೆಂಬ ಅಭಿಪ್ರಾಯ ಆಗ ಕಂಡಿರಲಿಲ್ಲ. ಈಗ ಸರ್ವೆ ಸೆಟಲ್‌ಮೆಂಟ್ ವರದಿ ಬಂದಮೇಲೆ ಇಷ್ಟು ದೊಡ್ಡ ಪರಿಣಾಮ ಇವರು ಉಂಟುಮಾಡುತ್ತಾರೆ, ಇದರಿಂದ ಬಹಳ ಧಕ್ಕೆ ಬರುತ್ತದೆ ಎಂಬ ಅಭಿಪ್ರಾಯ ಆಗ ಇದ್ದಿದ್ದರೆ ಬಹುಶಃ ಒಂದು ರೂಪಾಯಿನಲ್ಲಿ ಒಂದಾಣೆ ಕಂದಾಯವನ್ನು ಕೊಡಬಹುದೆಂಬ ಒಂದು ಅಭಿಪ್ರಾಯ ಆಗ ಇರುತ್ತಿತ್ತೋ ಏನೋ ಎಂಬ ಪ್ರಶ್ನೆ ಈಗ ಮೂಡಿ ಬರುತ್ತಿದೆ. ಏಕೆಂದರೆ, ಒಂದು ರೂಪಾಯಿನಲ್ಲಿ ಒಂದಾಣೆ ಕಂದಾಯ ಗ್ರಾಸ್ ಇನ್‌ಕಂನಲ್ಲಿ ಕೊಡಬೇಕೆಂಬ ನಿಯಮ ರೆವಿನ್ಯೂ ಕೋಡಿನಲ್ಲಿ ಇರುವುದರಿಂದಲೇ ಇವತ್ತು ಇಷ್ಟು ದೊಡ್ಡ ಕಂದಾಯದ ಹೊರೆ ನಮ್ಮ ಮುಂದೆ ಬಂದು ನಿಂತಿದೆಯೆಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಈಗ ರೆವಿನ್ಯೂ ಸೆಟಲ್‌ಮೆಂಟ್ ಆಫೀಸರವರು ಕೊಟ್ಟಂಥ ವರದಿಯಲ್ಲಿ ಅವರು ಯಾವ ರೀತಿ ಸಲಹೆಯನ್ನು ಕೊಟ್ಟಿದ್ದಾರೋ ಅದು ತಪ್ಪು ಎಂಬುದಾಗಿ ನಾವು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ರೂಪಾಯಿನಲ್ಲಿ ಒಂದಾಣೆ ಕಂದಾಯ ಕೊಡಬಹುದೆಂಬ ಒಂದು ಕಾನೂನನ್ನು ನಾವೇ ನಿರೂಪಿಸಿ ಅವರನ್ನು ನೀವು ವರದಿ ಕೊಡಿ ಎಂದು ಹೇಳಿದಮೇಲೆ ಅವರು ಕೊಟ್ಟಂಥ ವರದಿ ಸರಿಯಲ್ಲ, ಅವರು ತೋರಿಸಿರುವಂಥ ಕಂದಾಯ ಹೊರೆ ಸರಿಯಲ್ಲವೆಂದು ಈಗ ಕೆಲವರು ಹೇಳುವುದನ್ನು ನಾನಂತೂ ಒಪ್ಪುವುದಿಲ್ಲ. ಆದರೆ ಈ ವರದಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಆ ಸಲಹೆಗಳನ್ನು ನಾವು ವಿಮರ್ಶೆ ಮಾಡಿ ಅವು ಸರಿಯೇ ಅಥವಾ ತಪ್ಪೇ ಎಂಬುದನ್ನು ಆಲೋಚನೆ ಮಾಡುವುದು ಉಚಿತವಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಇದನ್ನು ಬಹಳ ಸೈಂಟಿಫಿಕ್ಕಾಗಿ ಮಾಡಿದ್ದಾರೆ. ಬಹಳವಾಗಿ ಪರ್ಯಾಲೋಚನೆ ಮಾಡಿ ಇದನ್ನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾರೆಂಬುದಾಗಿ ಹೇಳಿದರು. ನಾನು ಈ ಬಗ್ಗೆ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈಗ ಈ ಸೆಟಲ್‌ಮೆಂಟ್ ವರದಿಯ ಮೇಲೆ ಸಾಧಾರಣವಾಗಿ 60 ಸಾವಿರ ಅಬ್‌ಜೆಕ್ಷನ್ಸ್ ಫೈಲ್ ಮಾಡಿ, ಆ ಅಬ್‌ಜೆಕ್ಷನ್ಸ್ ಎಲ್ಲಾ ಪರಿಶೀಲನೆ ಮಾಡಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಏನೊಂದು ಅಭಿಪ್ರಾಯಕ್ಕೆ ಬಂದಿದ್ದಾರೆನ್ನುವ ವಿಚಾರವನ್ನು ನಮ್ಮ ಮುಂದೆ ಸರ್ಕಾರದವರು ಇಡುವುದು ಬಹಳ ಉಚಿತವೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಯಾವ ರಾಜಕೀಯ ವ್ಯವಹಾರಕ್ಕೂ ಹಾಗೂ ಯಾವ ಓಟಿನ ಬಲೆಗೂ ಅಥವಾ ಯಾರ ಒಂದು ಪ್ರಭಾವಕ್ಕೂ ಬೀಳದೆ ಇರುವುದರಿಂದ ಅಂತಹ ಸರ್ಕಾರೀ ಅಧಿಕಾರಿಗಳು ಅಲ್ಲಲ್ಲಿ ಈ ಸೆಟಲ್‌ಮೆಂಟ್ ವರದಿಯ ವಿಚಾರವಾಗಿ ಜನರು ಕೊಟ್ಟಂಥ ಅಬ್‌ಜೆಕ್ಷನ್ಸ್ ಮೇಲೆ ಅವರು ಏನು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದನ್ನು ಯಾವ ರೀತಿಯಲ್ಲಿ ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಎನ್ನುವ ವಿಷಯವನ್ನು ನಮಗೆ ಸರ್ಕಾರದವರು ತಿಳಿಸುವುದರಿಂದ ಅದನ್ನು ನಾವು ಚೆನ್ನಾಗಿ ತಿಳಿದುಕೊಂಡು ಆ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದರಲ್ಲಿ ಬಹಳವಾಗಿ ಪ್ರಯೋಜನವಾಗುತ್ತದೆಂದು ಹೇಳಿದರೆ ತಪ್ಪಾಗಲಾರದು.

ಅವರ ಅಭಿಪ್ರಾಯ ನಿಜವಾಗಿಯೂ ಭೂಕಂದಾಯವನ್ನು ಏರಿಸುವ ವಿಚಾರದಲ್ಲಿ ಏನೇನು ತಕರಾರುಗಳನ್ನು ಹಾಕುವುದಕ್ಕೆ ಎಷ್ಟು ಸಾಧ್ಯವಿದೆಯೋ, ಅಷ್ಟೂ ನಿಜವಾದ ಪರಿಸ್ಥಿತಿಯನ್ನು ಪ್ರತಿ

ಬಿಂಬಿಸುತ್ತದೆ. ಈ ವಿಚಾರವಾಗಿ ಅವರು ತಮ್ಮ ಅಭಿಪ್ರಾಯವನ್ನು ಕೊಡಲು ಸರ್ಕಾರವನ್ನು ಕೇಳಬೇಕು ಎಂಬ ವಿಚಾರವನ್ನು ಸರ್ಕಾರ ಆಲೋಚನೆ ಮಾಡಿದೆಯೇ ? ಅವರ ಒಂದು ಅಭಿಪ್ರಾಯದ ಮೇಲೆ ಈ ಸರ್ಕಾರ ಯಾವ ಒಂದು ಅಭಿಪ್ರಾಯವನ್ನು ಹೊಂದಿದೆ ಎಂಬುದನ್ನು ಈ ಸಂದರ್ಭದಲ್ಲಿ ಈ ಸಭೆ ತಿಳಿದುಕೊಳ್ಳುವುದು ಉಚಿತ. 19 ಜಿಲ್ಲೆಗಳಲ್ಲಿಯೂ ಡೆಪ್ಯುಟಿ ಕಮೀಷನರು ಈ ತಕರಾರು ಅರ್ಜಿಗಳನ್ನು ಪರಿಶೀಲನೆ ಮಾಡಿ ಅವರು ತಮ್ಮ ರಿಪೋರ್ಟಿನಲ್ಲಿ ಯಾವ ರೀತಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ? 60 ಸಾವಿರ ತಕರಾರು ಅರ್ಜಿಗಳನ್ನೂ ರಿಜೆಕ್ಟ್ ಮಾಡಿದ್ದಾರೆಯೇ ? ಆ 60 ಸಾವಿರ ಅರ್ಜಿಗಳಲ್ಲಿ ಯಾವ ಒಂದು ಅರ್ಜಿಯಲ್ಲಿಯೂ ನ್ಯಾಯಬದ್ಧವಾದ ತಕರಾರು ಇರಲಿಲ್ಲವೇ, ಎಂಬ ಪ್ರಶ್ನೆ ನಮ್ಮಲ್ಲಿ ಮೂಡುತ್ತದೆ. ಇದರಲ್ಲಿ ಒಂದು ಮಾತ್ರ ಎದ್ದು ಕಾಣುತ್ತದೆ. ಅದು ಏನೆಂದರೆ 60 ಸಾವಿರ ಜನರೂ ಹಾಕಿರತಕ್ಕ ತಕರಾರು ಖಾಲಿ ತಕರಾರು ಆಗಿ ಈ ರೆವಿನ್ಯೂ ಸೆಟ್ಲ್‌ಮೆಂಟ್ ರಿಪೋರ್ಟ್ ನಮ್ಮ ಮುಂದೆ ಬಂದಿದೆ ಎಂದು ಸೈನ್‌ಟಿಫಿಕ್ ಆಗಿ ನಾವು ಒಪ್ಪಿಕೊಳ್ಳುವುದು ಸರಿಯಲ್ಲ. 60 ಸಾವಿರ ಅರ್ಜಿಗಳಲ್ಲಿ ಒಂದಾದರೂ ನ್ಯಾಯವಾದ, ಸೈನ್‌ಟಿಫಿಕ್ ಆದ ತಕರಾರು ಇರಬೇಕು. ರೆವಿನ್ಯೂ ಆಫೀಸರ ರಿಪೋರ್ಟಿನಲ್ಲಿಯೂ ಯಾವ ಬದಲಾವಣೆಯೂ ಆಗದೆ, ಡೆಪ್ಯುಟೀ ಕಮೀಷನರ ರಿಪೋರ್ಟಿನಲ್ಲಿಯೂ ಯಾವ ಬದಲಾವಣೆಯೂ ಆಗದೆ, ಸೆಟ್ಲ್‌ಮೆಂಟ್ ಕಮೀಷನರ ರಿಪೋರ್ಟಿನಲ್ಲಿಯೂ ಯಾವ ಬದಲಾವಣೆಯೂ ಆಗದೆ, ಸರ್ಕಾರದವರೂ ಸಹ ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಈ ಸೆಟ್ಲ್‌ಮೆಂಟ್ ವರದಿ ಸೈನ್‌ಟಿಫಿಕ್ ಆಗಿ ಈ ಸಭೆಯ ಮುಂದೆ ಬಂದಿದೆ ಎಂದರೆ ಎಷ್ಟರಮಟ್ಟಿಗೆ ಇದಕ್ಕೆ ಬೆಲೆ ಇದೆ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಡೆಪ್ಯುಟೀ ಕಮೀಷನರುಗಳು ತಕರಾರು ಅರ್ಜಿಗಳನ್ನು ಪರಿಶೀಲನೆ ಮಾಡಿ ಯಾವ ರೀತಿಯ ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಟ್ಟಿದೆ ಎಂಬುದನ್ನು ಈ ಮಾನ್ಯ ಸಭೆಯ ಸದಸ್ಯರಿಗೆ ಕೊಡಬೇಕು, ಇದು ಉಚಿತ. ಅದನ್ನು ಈ ಮಾನ್ಯ ಸಭೆಯಲ್ಲಿ ಪರಿಶೀಲನೆ ಮಾಡುವುದು ಉಚಿತ. ಈ ಅಭಿಪ್ರಾಯಕ್ಕೆ ಒಂದು ಬೆಲೆ ಇದೆ. ಅದನ್ನು ಸರ್ಕಾರದವರು ಮತ್ತು ಈ ಮಾನ್ಯ ಸಭೆ ಆಲೋಚನೆ ಮಾಡಬೇಕು ಎನ್ನುವಂತಹ ಒಂದು ಕೋರಿಕೆಯನ್ನು ನಾನು ಮಾನ್ಯ ಕಂದಾಯ ಸಚಿವರಲ್ಲಿ ಇಡಲಿಚ್ಛಿಸುತ್ತೇನೆ.

ಇನ್ನು 1/16 ಎಂದರೆ, ಒಂದು ರೂಪಾಯಿಗೆ ಒಂದಾಣೆ ಕಂದಾಯವನ್ನು ಹಾಕಬೇಕು ಎಂದು ಹೇಳುವುದು. ರೆವಿನ್ಯೂ ಕೋಡಿನ ಕಡ್ಡಾಯವಾದ ಕಾನೂನಾಗಿದೆ ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಯಾವ ರೀತಿಯಲ್ಲಿ ಪ್ರಯತ್ನಪಟ್ಟರೂ ಈ ಕಾನೂನಿನ ಅನ್ವಯವಾಗಬೇಕು, 1/16 ಭಾಗದಷ್ಟು ಕಂದಾಯವನ್ನು ಹಾಕಲೇಬೇಕು ಎಂದು ಹೇಳುತ್ತಾರೆ. ರೆವಿನ್ಯೂ ಸೆಟ್ಲ್‌ಮೆಂಟ್ ರಿಪೋರ್ಟಿನಲ್ಲಿ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸರು ಏನು ಹೇಳುತ್ತಾರೆ ಎಂದರೆ, ರೈತನ ಆರ್ಥಿಕ ಸ್ಥಿತಿ ಬಹಳ ಕಷ್ಟ ಇದೆ, ಆದ್ದರಿಂದ ಅದನ್ನು 1/18 ಮಾಡುವುದು ಉಚಿತ ಎಂದು ಹೇಳುತ್ತಾರೆ. ಈಗ ಉದಾಹರಣೆಗೆ ಕೊಡಗಿನ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸರಾದ ಖಂಡೇರಾವ್ ಎಂಬುವರು ಏನು ಬರೆಯುತ್ತಾರೆ ಎಂದರೆ.

> "......there has been alround improvement. I am doubtful if the general economic conditions of the agriculturists has improved considerably. None of the agriculturists in the zone have expressed to me during my enquiry in the villages that agriculture has turned out to be a profitable industry. An agriculturist does not know where he stands. Most of the agriculturists are heavily indebted. No doubt the prices of paddy and ragi, principal crops in the zone, have considerably increased. At the same time keeping pace with the rice in wages the cost of cultivation has also increased and so also cost of living. Hence one has to be cautious in levying........
>
> Taking all these into consideration I propose for lowering the rate of ratio from 1/16 to 1/18 in the case of wet land in these two groups."

ಎಂದು ನಮ್ಮ ರೆವಿನ್ಯೂ ಕೋಡಿನ ಆಧಾರದಮೇಲೆ 1/16 ಕಂದಾಯವನ್ನು ಹಾಕಬಹುದು ಎಂಬ ಆದೇಶವನ್ನು ಮೊದಲೇ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸರು ನೋಡಿ ಅದನ್ನು 1/18 ಮಾಡುವುದು ಉಚಿತ ಎಂದು ಅವರು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯ ವಿಚಾರವಾಗಿ ಸೆಟ್ಲ್‌ಮೆಂಟ್

(ಶ್ರೀ ಎ. ಪಿ. ಅಪ್ಪಣ್ಣ)

ಕಮೀಷನರಾಗಲೀ, ರಾಜ್ಯ ಸರ್ಕಾರದವರಾಗಲೀ ಈ ನಿರ್ಣಯವನ್ನು ಈ ಸಭೆಯ ಮುಂದೆ ತರುವುದಕ್ಕಿಂತ ಮುಂಚೆ ಏನು ಆಲೋಚನೆ ಮಾಡಿದ್ದಾರೆ? ಅವರ ಅಭಿಪ್ರಾಯದಲ್ಲಿ ಏನಾದರೂ ತಿರುಳು ಇದೆಯೇ ಎನ್ನುವ ವಿಚಾರವನ್ನು ಆಲೋಚನೆ ಮಾಡುವುದು ಉಚಿತ ಎಂದು ನನ್ನ ಸಲಹೆ. ಏತಕ್ಕೆಂದರೆ ಈ ಭೂಕಂದಾಯವನ್ನು ಪುನರ್‌ವಿಮರ್ಶೆಮಾಡುವ ಸಂದರ್ಭದಲ್ಲಿ ಆ ಅಧಿಕಾರಿಗಳು ರಾಜಕೀಯ ಕ್ಷೇತ್ರದಲ್ಲಿ ಇಲ್ಲದಿದ್ದರೂ, ಮುಂದೆ ಅವರು ಜನಗಳಿಂದ ಯಾವ ವೋಟನ್ನೂ ಕೇಳುವ ಅವಶ್ಯಕತೆ ಇಲ್ಲದೇ ಇದ್ದರೂ, ರೈತನ ಸ್ಥಿತಿಯನ್ನು ನೋಡಿ ಕಂದಾಯವನ್ನು 1/18 ಮಾಡುವುದು ಉಚಿತ ಎಂದು ಹೇಳುವುದನ್ನು ನೋಡಿದರೆ ಅದರಲ್ಲಿ ಏನೋ ತಿರುಳು ಇರಬೇಕು ಎಂದು ಅದನ್ನು ಏತಕ್ಕೆ ಪರಿಶೀಲನೆಮಾಡ ಬಾರದು ಎಂಬುದನ್ನು ಈ ನಿರ್ಣಯವನ್ನು ಈ ಸಭೆಯ ಮುಂದೆ ತರುವುದಕ್ಕೆ ಮುಂಚೆ ಸರ್ಕಾರದವರಾಗಲೀ ಅಥವಾ ಸೆಟ್ಲ್‌ಮೆಂಟ್ ಕಮೀಷನರಾಗಲೀ ಆಲೋಚನೆ ಮಾಡುವುದು ಉಚಿತವಾಗಿತ್ತು. ಅದನ್ನು ಆಲೋಚನೆ ಮಾಡಿ ಆ ಬಗ್ಗೆ ಒಂದು ತೀರ್ಮಾನವನ್ನು ತೆಗೆದು ಕೊಂಡು ನಂತರ ಅದನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸಬೇಕಾಗಿತ್ತು. ಸೆಟ್ಲ್‌ಮೆಂಟ್ ಆಫೀಸರು ಏನು ರಿಪೋರ್ಟು ಮಾಡಿದ್ದಾರೆ ಎನ್ನುವ ವಿಷಯವನ್ನು ಮೊದಲಿನಿಂದ ಕೊನೆಯ ವರೆಗೂ ಯಾರು ಯಾವ ಆಲೋಚನೆಯನ್ನೂ ಮಾಡಿಲ್ಲ ಎಂದು ನಾನು ಹೇಳಬೇಕಾಗಿದೆ. ಈ ದೃಷ್ಟಿ ಯಿಂದ ಇದನ್ನು ಈ ಮಾನ್ಯ ಸಭೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು, ಇದನ್ನು ಯದ್ವಾ ತದ್ವಾ ಮಾಡಿ $3\frac{1}{2}$ ಕೋಟಿ ರೂಪಾಯಿಗಳ ಹೆಚ್ಚಿನ ಕಂದಾಯವನ್ನು ಹಾಕುವುದು ಅದೇನು ಒಂದು ದೊಡ್ಡ ಕರವಲ್ಲ ಎಂದು ಹೇಳುವ ಬದಲು ಈ ಪ್ರಶ್ನೆಯನ್ನು ಸ್ವಲ್ಪ ವಿಚಾರಮಾಡಿ ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ, ಇದನ್ನು ಪುನರ್ ವಿಮರ್ಶೆಮಾಡಿ, ನಂತರ ಈ ಸಭೆಯ ಮುಂದೆ ತರುವಂತಹ ಕ್ರಮವನ್ನು ಸರ್ಕಾರದವರು ಕೈಗೊಳ್ಳದಿದ್ದರೆ ಇದು ಒಂದು ದೊಡ್ಡ ಅಪರಾಧವನ್ನು ಮಾಡಿದಂತಾಗುತ್ತದೆ. 30 ವರ್ಷಕ್ಕೊಂದು ಸಾರಿ ಕಂದಾಯವನ್ನು ಪುನರ್ ವಿಮರ್ಶೆ ಮಾಡಬೇಕು, ಅದಕ್ಕೋಸ್ಕರ ಇದನ್ನು ಮಾಡುತ್ತಿದ್ದೇವೆ ಎಂದು ಹೇಳತಕ್ಕ ಪ್ರಶ್ನೆ ಇದು ಅಲ್ಲ. ಇದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ಅವರು ಇದನ್ನು ಪುನರ್‌ವಿಮರ್ಶೆ ಮಾಡಿ, ಅವರ ರಿಪೋರ್ಟು ಈ ಸಭೆಗೆ ಬಂದು ಅದನ್ನು ಈ ಸಭೆಯಲ್ಲಿ ಪಾಸು ಮಾಡಬೇಕಾದರೆ ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಒಂದು ವೇಳೆ ಈ ವರ್ಷವೇ ಇದನ್ನು ಇಲ್ಲಿ ಪಾಸು ಮಾಡಿದರೂ ಕೂಡ ಈ ಕಂದಾಯವನ್ನು ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲ. ಬರುವ ವರ್ಷ ಇದನ್ನು ವಸೂಲು ಮಾಡು ವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಆಲೋಚನೆ ಮಾಡುವುದಕ್ಕೆ ಒಂದು ವರ್ಷ ಕಾಲಾವಕಾಶವನ್ನು ಇಟ್ಟುಕೊಳ್ಳಬೇಕು. ಇದನ್ನು ಈ ಮಾನ್ಯ ಸಭೆಯವರು ಪುನರ್‌ವಿಮರ್ಶೆ ಮಾಡಬೇಕು, ಈ ದೃಷ್ಟಿಯಿಂದ ಇದನ್ನು ಆಲೋಚನೆ ಮಾಡುವುದು ಉಚಿತ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವೊತ್ತು ಮಾನ್ಯ ಕಂದಾಯ ಸಚಿವರು ಹೇಳಿದರು, ಈ ಸೆಟ್ಲ್‌ಮೆಂಟ್ ರಿಪೋರ್ಟ್ ಪ್ರಕಾರ ಕಂದಾಯವನ್ನು ರಿವಿಜನ್ ಮಾಡುವುದಾದರೆ ಈಗ $3\frac{1}{2}$ ಕೋಟಿ ರೂಪಾಯಿಗಳ ಕಂದಾಯ ಇರುವುದು 7 ಕೋಟಿ ರೂಪಾಯಾಗುತ್ತದೆ. ಅದೇನು ರೈತರಿಗೆ ಅಂಥಾ ದೊಡ್ಡ ಹೊರೆ ಆಗುವುದಿಲ್ಲ. ಮತ್ತು ನಮ್ಮ ರಾಜ್ಯದ 125 ಕೋಟಿ ರೂಪಾಯಿಗಳ ಬಡ್ಜೆಟ್ಟಿನಲ್ಲಿ ಸಾಧಾ ರಣವಾಗಿ 100ಕ್ಕೆ 75 ಭಾಗ ರೈತನಿಗೆ ಖರ್ಚಾಗುತ್ತದೆ ಎಂದು ಹೇಳಿದರು. ಆದರೆ ಆ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳುವುದಾದರೆ, 100ಕ್ಕೆ 75 ಭಾಗ ರೈತನಿಗೆ ಖರ್ಚಾಗುತ್ತಿಲ್ಲ ಎಂದು ನಾನು ಹೇಳುತ್ತೇನೆ. 100ಕ್ಕೆ 75 ಭಾಗ ತೆರಿಗೆಯನ್ನು ರೈತನೇ ಕೊಡುತ್ತಾನೆ. ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಟ್ಯಾಕ್ಸ್ ಈ ರೀತಿ ಅನೇಕ ತೆರಿಗೆಗಳನ್ನು ರೈತನು ಕೊಡುತ್ತಾನೆ. ಈ ರೀತಿಯಾಗಿ ರೈತನಿಂದ ಎಷ್ಟೋ ಹಣ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದೆ. ಅವನು ಕೊಡುವಂಥ ಕಂದಾಯಕ್ಕೆ ಸರಿಯಾದ ಅಭಿವೃದ್ಧಿಯನ್ನು ಅವರಿಗೆ ಕೊಡುವುದರ ಬದಲು, ಅವನ ಅಭಿವೃದ್ಧಿಗೆ ಪುನಃ ಕಂದಾಯ ಹಾಕುವಂಥಾದ್ದು ಸರಿಯಲ್ಲ. ಅವನ ಬೆಳೆಗೆ ಸೂಕ್ತವಾದ ಕಂದಾಯ ಹಾಕುತ್ತಿದ್ದಾರೆ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಆಹಾರ ಸಾಮಗ್ರಿ ಕೊರತೆ ಹೆಚ್ಚುತ್ತದೆ. ಇದಕ್ಕೆ ಸರ್ಕಾರದ ನೀತಿಯೇ ಕಾರಣವೆಂದರೂ ತಪ್ಪಾಗಲಾರದು. ನಮ್ಮ ದೇಶದಲ್ಲಿ ಆಹಾರ ಸಾಮಗ್ರಿ ಕೊರತೆ ಇದೆ. ಖಂಡೇರಾಯರ ರಿಪೋರ್ಟಿನಲ್ಲಿ ಕೊಡಗಿನಲ್ಲಿ ಒಂದು ಎಕರೆ ಭತ್ತ ಬೆಳೆದು ಮಾರಿದರೆ 280 ರೂಪಾಯಿ ಬರುತ್ತದೆಂದು ಹೇಳುತ್ತಾರೆ. ಆದರೆ ಒಂದು ಎಕರೆಯಲ್ಲಿ ಬೆಳೆ ಬೆಳೆಯುವುದಕ್ಕೆ 250 ರೂಪಾಯಿ ಖರ್ಚಾಗುತ್ತದೆಂದೂ ಹೇಳಿದ್ದಾರೆ. ಆ ವರದಿ ಪ್ರಕಾರ ಒಬ್ಬ ರೈತನಿಗೆ ಒಂದು ಎಕರೆ ಬೆಳೆಯಿಂದ ನೆಟ್ ಇನ್‌ಕಂ 30 ರೂಪಾಯಿ ಎಂದಾಯಿತು. ಈ ಬತ್ತದ ಮೇಲೆ $17\frac{1}{2}$ ರೂಪಾಯಿ ಕಂದಾಯ ಹಾಕಿದರೆ ರೈತನಿಗೆ ಎಷ್ಟು ಉಳಿಯುತ್ತದೆ ಎನ್ನುವುದನ್ನು

ನಾವು ಆಲೋಚನೆ ಮಾಡಬೇಕು. ಅವರ ಸ್ಟ್ಯಾಟಿಸ್‌ಟಿಕ್ಸ್ ಪ್ರಕಾರ ಸ್ಟ್ಯಾಂಡರ್ಡ್‌ರೇಟ್ ಅಲ್ಲಿಗೆ ಅನ್ವಯಿಸುವುದಿಲ್ಲ. ಇದು ಆವರೇಜ್ ವರ್ಕ್ ಔಟ್ ಮಾಡಿದ್ದು ಅಲ್ಲ. It is from actuals. ಅದು ಫಸ್ಟ್‌ಕ್ಲಾಸ್ ಲ್ಯಾಂಡ್ ಇದ್ದೇ ಇರಬೇಕು. ಕ್ಲಾಸಿಫಿಕೇಶನ್ ಆಗಿಲ್ಲ. ಈ ದೃಷ್ಟಿಯಿಂದ, 280 ರೂಪಾಯಿ ಬರುವ ಉತ್ಪತ್ತಿಯಲ್ಲಿ, 250 ರೂಪಾಯಿ ಖರ್ಚು ತೆಗೆದರೆ, 30 ರೂಪಾಯಿ ಉಳಿಯುತ್ತದೆ. ಅದರಲ್ಲಿ 17½ ರೂಪಾಯಿ ಕಂದಾಯ ಸರ್ಕಾರಕ್ಕೆ ತೆಗೆದುಕೊಂಡರೆ, ದೇಶದಲ್ಲಿ ವ್ಯವಸಾಯಕ್ಕೆ ಉತ್ತೇಜನ ಕೊಟ್ಟಹಾಗಾಗುತ್ತದೆಯೇ? ಇವತ್ತು ನಮ್ಮ ದೇಶದಲ್ಲಿ ಆಹಾರ ಸಾಮಗ್ರಿ ಜಾಸ್ತಿ ಬೆಳಸಬೇಕು, ಅದಕ್ಕೆ ಉತ್ತೇಜನ ಕೊಡಬೇಕು ಎಂದು ಹೇಳುವುದಾದರೆ, ಬೆಳಸಬೇಕಾದರೆ ಆಗಿರುವ ವೆಚ್ಚವನ್ನು ಪರಿಶೀಲನೆ ಮಾಡುವುದು ಒಳ್ಳೆಯದು. ನಾನು ಕಂದಾಯ ಏರಬಾರದು ಎಂಬ ವಾದವನ್ನು ಮಾಡುತ್ತಾ ಇಲ್ಲ; ಅದು ಏರಬೇಕಾದರೆ, ಅದಕ್ಕೆ ಒಂದು ಮಿತಿ ಇರಬೇಕು; ಆ ಮಿತಿ ಆಲೋಚನೆ ಮಾಡಿಲ್ಲ. ಅದು ಯದ್ವಾತದ್ವಾ ಏರಿಹೋಗುತ್ತಾ ಇದೆ. ಕೊಡಗಿನಲ್ಲಿ ಕಾಫಿ ವ್ಯವಸಾಯದ ಜಮೀನಿಗೆ 2 ರೂಪಾಯಿ ಇದ್ದಂಥಾದ್ದು 76 ರೂಪಾಯಿಗೆ ಏರಿ ಹೋಗಿದೆ. 76 ರೂಪಾಯಿ ಹಾಕಿದರೆ, 3,700 ಪರ್ಸೆಂಟ್ ಜಾಸ್ತಿ ಆಯಿತು. ನಾನು ಯಾವ ದೇಶದಲ್ಲಿಯೂ 3,700 ಪರ್ಸೆಂಟ್ ಆದದ್ದು ಓದಿಲ್ಲ, ಕೇಳಿಯೂ ಇಲ್ಲ. ನೀವು ಯಾರಾದರೂ ಕೇಳಿದ್ದೀರೋ ಏನೋ; ಅರಾಬಿಕಾ 76 ಆಯಿತು. ಹಾಗೆಯೇ ರೋಬಸ್ಟಾ 55 ರೂಪಾಯಿಗೆ ಏರಿದೆ, ಅಂದರೆ 2,650 ಪರ್ಸೆಂಟ್ ಇಂಕ್ರೀಸ್ ಆಯಿತು. ಇದರಲ್ಲಿ ಫಲತಾಂಶವೇನಾಗುತ್ತದೆ ನೋಡಬೇಕು. ಈಗ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಇದೆ.

Sri M. C. BASAPPA.—What is the income in each acre?

ಶ್ರೀ ಎ. ಪಿ. ಅಪ್ಪಣ್ಣ.—ನಾನು ಹೇಳುತ್ತೇನೆ, ನೀವು ಇನ್‌ಕಂ ಬೇಸಿಸ್ ಮೇಲೆ ಕಂದಾಯ ಹಾಕುವುದಾದರೆ, ಹಾಗೆ ಡಿಕ್ಲೇರ್ ಮಾಡಿ. It is not based on income. Land revenue is not based on income. It is taxed on land. Now there is agricultural income-tax. 76 ರೂಪಾಯಿ ಹಾಕುತ್ತೀರಿ. ಇದರಿಂದ ಯಾರಿಗೆ ಪ್ರಯೋಜನವಾಗುತ್ತದೆ? ಇವತ್ತು ಅಗ್ರಿಕಲ್ಚರ್ ಇನ್‌ಕಂ-ಟ್ಯಾಕ್ಸ್ ಕಾನೂನು ಪ್ರಕಾರ 25 ಸಾವಿರ ರೂಪಾಯಿ ನೆಟ್ ಇನ್‌ಕಂ ಇದ್ದರೆ, ಸೂಪರ್-ಟ್ಯಾಕ್ಸ್ ಕೊಡಬೇಕು. ಒಬ್ಬ ಮನುಷ್ಯನಿಗೆ 76 ಸಾವಿರ ಇನ್‌ಕಂ ಇದ್ದು 10 ಸಾವಿರ ರೂಪಾಯಿ ಲ್ಯಾಂಡ್ ರೆವಿನ್ಯೂ ಕೊಟ್ಟಿದ್ದರೆ, he can bring Rs. 26,000 on expenditure side. ಆವಾಗ ಸೂಪರ್-ಟ್ಯಾಕ್ಸ್ ಅವಾಯ್ಡ್ ಆಗುತ್ತದೆ. ಆದ್ದರಿಂದ ಇದು ದೊಡ್ಡ ಪ್ಲಾಂಟರುಗಳಿಗೆ ಇನ್‌ಕಂ-ಟ್ಯಾಕ್ಸ್ ಅವಾಯಿಡ್ ಮಾಡಲು ಅತ್ಯಧಿಕವಾಗಿ ಅನುಕೂಲವಾಗುತ್ತದೆ. ಅವನು ಇವತ್ತು ಅತ್ಯಧಿಕವಾಗಿ ಲ್ಯಾಂಡ್ ರೆವಿನ್ಯೂ ಕೊಡುತ್ತಿರುತ್ತಾನೆ. ಅವನು ಎಕ್ಸ್‌ಪೆಂಡಿಚರ್ ಸೈಡ್ ಅದನ್ನು ತಂದು, ನೆಟ್ ಇನ್‌ಕಂ ಕೆಳಗಿಳಿಸಿಕೊಂಡು, ಸೂಪರ್ ಟ್ಯಾಕ್ಸಿನಲ್ಲಿ ಹೈಯರ್ ಸ್ಲ್ಯಾಬ್ ಇನ್‌ಕಂ ಟ್ಯಾಕ್ಸ್ ಅವಾಯ್ಡ್ ಮಾಡುತ್ತಾನೆ. ಆಗ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಖೋತಾ ಆಗುತ್ತದೆ. ಇವತ್ತು ಇನ್‌ಕಂ ಟ್ಯಾಕ್ಸ್ ಕೊಡಲಿಕ್ಕೆ ಅರ್ಹತೆ ಇಲ್ಲದೆ ಇರತಕ್ಕ ಬಡ ಪ್ಲಾಂಟರಿಗೆ ಧಕ್ಕೆ ಇರುತ್ತದೆ. ಅವನು ಹಾಗೆ ತೋರಿಸಿ ಅಗ್ರಿಕಲ್ಚರ್ ಇನ್‌ಕಂ-ಟ್ಯಾಕ್ಸ್ ಅವಾಯಿಡ್ ಮಾಡುವುದಕ್ಕಾಗುವುದಿಲ್ಲ. ಕಾಫಿಯಲ್ಲಿ ಯಾರೂ ಅಗ್ರಿಕಲ್ಚರ್ ಇನ್‌ಕಂ-ಟ್ಯಾಕ್ಸ್ ಅವಾಯಿಡ್ ಮಾಡಲಿಕ್ಕೆ ಸಾಧ್ಯವಿಲ್ಲ. ವ್ಯವಹಾರವೆಲ್ಲಾ ಕಾಫಿಬೋರ್ಡ್ ಮೂಲಕ ನಡೆಯುತ್ತದೆ. ಆದ್ದರಿಂದ ಸರ್ಕಾರಕ್ಕೆ ಸರಿಯಾದ ಅಕೌಂಟ್ಸ್-ಸಿಗದೆ ಹೋಗುವುದಿಲ್ಲ. ಆದ್ದರಿಂದ ಇವತ್ತು ಏರಿಸಿದ ಕಂದಾಯ, ದೊಡ್ಡ ರೈತನಿಗೆ ಪ್ರಯೋಜನವಾಗಿ, ಸಣ್ಣ ರೈತನಿಗೆ ಪ್ರಯೋಜನವಾಗದ ಹಾಗಿದೆ. ಇದು ನ್ಯಾಯವೆ? ಆದ್ದರಿಂದ ಈ ಏರಿಕೆಯಿಂದ ಯಾರಿಗೆ ಪ್ರಯೋಜನವಾಗಿದೆ? ಸಣ್ಣ ಹಿಡುವಳಿದಾರರಿಗೆ ಪ್ರಯೋಜನವಾಗದೆ, ದೊಡ್ಡ ಪ್ಲಾಂಟರುಗಳಿಗೆ ಪ್ರಯೋಜನವಾಗಿದೆ ಅಂದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ನೋಡಿದರೆ, ಈ ಏರಿಕೆಯಿಂದ ಹೊರೆ ಯಾವರೀತಿ ಹಂಚಿಕೆ ಆಗುತ್ತದೆ? ಈ ಹೊರೆಯನ್ನು ನೋಡಿದ್ದೇ ಆದರೆ, ನಿಜವಾಗಿ ಯಾರಿಗೆ ಕಂದಾಯ ಕೊಡಲಿಕ್ಕೆ ಅರ್ಹತೆ ಇಲ್ಲವೋ, ಅವನಿಗೇ ಹೆಚ್ಚು ಭಾರ ಹೋಗುತ್ತದೆ; ಭಾರ ಹೊರುವ ಯೋಗ್ಯತೆ ಇರುವವನಿಗೆ ಸರಿಯಾದ ಭಾರ ಹೋಗುವುದಿಲ್ಲ. ಹೊರಲು ಶಕ್ತಿ ಇಲ್ಲದಂಥ ರೈತನಿಗೆ, ಜನತೆಗೆ ಇದರಿಂದ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಈ ವಿಚಾರವನ್ನು ಪರಿಶೀಲನೆ ಮಾಡುವುದು ಉಚಿತ. ಮತ್ತು ಈರೀತಿ ಏರಿಕೆಯಿಂದ ಬಡವರ ಹಿತಕ್ಕೆ ಧಕ್ಕೆ ಬರುತ್ತದೆ ಅನ್ನುವುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಕಾಫಿ ಲ್ಯಾಂಡ್ ಬಗ್ಗೆ ಸೆಟ್ಲ್‌ಮೆಂಟ್ ಆಫೀಸರು ಈ ರೀತಿ ಹೇಳುತ್ತಾ ಇದ್ದಾರೆ.

"Considering the agricultural income-tax which these lands are subjected to, it is a matter for serious consideration if the

(ಶ್ರೀ ಎ. ಪಿ. ಅಪ್ಪಣ್ಣ)

standard rates could be applied to these lands in addition to the agricultural income-tax levied or otherwise."

What is the reaction of the State Government so far as this conclusion of the Revenue Settlement Officer is concerned ? We do not find any mention of that here.

ಬಹುಶಃ ಏನಾದರೂ ವಿವರಣೆ ಕೊಡಬೇಕಾಗುತ್ತದೆ. ಅವರು ಹೇಳುವುದು ಸರಿಯೇ ಅಥವ ಸರಿಯಿಲ್ಲವೇ, ಅನ್ನುವುದನ್ನು ನಾವು ಆಲೋಚನೆ ಮಾಡಬೇಕು. ಈ ವಿಚಾರವಾಗಿ ಆಲೋಚನೆ ಮಾಡುವುದಾದರೆ, ನಾವು ಅದನ್ನು ಪರಿಶೀಲನೆ ಮಾಡಿದಹಾಗೆ ಆಗುತ್ತದೆ. ಈ ಸಭೆ ನಾನು ಹೇಳಿದ ದೃಷ್ಟಿ ಕಡೆ ಸರಿಯಾದ ಗಮನ ಕೊಟ್ಟಹಾಗೆ ಕಾಣಿಸಲಿಲ್ಲ. ಒಂದು ಫಾರ್ಮಲ್ ರೆಸಲ್ಯೂಶನ್ ಮಾಡಿ, ಕಂದಾಯದ ರೂಪದಲ್ಲಿ ಜನತೆಯ ಮೇಲೆ ಹೆಚ್ಚು ಭಾರ ಬೀಳಬೇಕು ಎಂದು ಹೇಳುವುದು ಸರಿಯಲ್ಲ. ಇದನ್ನು ಆಳವಾಗಿ ಆಲೋಚನೆ ಮಾಡಬೇಕು. ಈ ಏರಿಕೆಯಿಂದ ಬರುವುದು ಇವತ್ತೆಲ್ಲಾ 3½ ಕೋಟಿ ಎಂಬ ತಾತ್ಸಾರ ಭಾವನೆ ಇರಬಹುದು. ನಮ್ಮ ಮೈಸೂರು ದೇಶದಲ್ಲಿ ಸಾಧಾರಣವಾಗಿ 100ಕ್ಕೆ 75 ಜನ ಜನತೆಯ ಮೇಲೆಯೇ ಈ ಭಾರ ಬೀಳುತ್ತದಲ್ಲಾ ಎಂಬ ದೃಷ್ಟಿಯಿಂದ ನೋಡಬೇಕು. ನೂರಕ್ಕೆ ಎಪ್ಪತ್ತೈದು ಗ್ರಾಮಾಂತರದ ಸಾಮಾನ್ಯ ಜನಕ್ಕೆ ಇದರ ಬಿಸಿ ತಟ್ಟುತ್ತದೆ. 125 ಕೋಟಿ ವರಮಾನದಲ್ಲಿ, 3½ ಕೋಟಿ ಏನು ಮಹಾ ಎಂಬ ಉಪೇಕ್ಷೆಯಿಂದ ನೋಡುವ ಪ್ರಶ್ನೆ ಇದಲ್ಲ. ಈ ಪ್ರಶ್ನೆಗೆ ನಿಜವಾಗಿ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಆದ್ಯತೆ ಕೊಟ್ಟಂತೆ ಆಗುವುದಿಲ್ಲ. ಈ ರೀತಿಯಿಂದ ಅನುಮೋದಿಸಿದರೆ ಮತ್ತು ನಾವು ಈ ಸೆಟಲ್‌ಮೆಂಟ್ ಆಫೀಸರ ರಿಪೋರ್ಟನ್ನು ಇನ್‌ಟೋಟೊ ಈ ಸಭೆ ಅಕ್ಸೆಪ್ಟ್ ಮಾಡಿಕೊಳ್ಳುವುದು ಸರಿಯಲ್ಲ. ನಾವು ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಕಂದಾಯದ ಏರಿಕೆಗೆ ನಾವು ವಿರುದ್ಧ ಎಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ಈ ಏರಿಕೆಯಿಂದ ಸಾಮಾನ್ಯ ಜನತೆಯ ಮೇಲೆ ಅಸಮತೆಯ ಭಾರವನ್ನು ಹೊರುತ್ತಿದ್ದೇವೆ ಎಂಬ ಅಂಶವನ್ನು ಈ ಸಭೆ ತನ್ನ ಗಮನಕ್ಕೆ ತೆಗೆದುಕೊಳ್ಳಬೇಕು, ಮತ್ತು ಈ ದೃಷ್ಟಿಯಿಂದ ಪರಿಶೀಲನೆ ಮಾಡಬೇಕು. ಈ ಸಂದರ್ಭದಲ್ಲಿ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಬೇಕು; ಆ ಸಮಿತಿ ಕೊಟ್ಟ ರಿಪೋರ್ಟನ್ನು ಪರಿಶೀಲನೆ ಮಾಡಿ, ಆಮೇಲೆ ಈ ಸಭೆ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು ಮತ್ತು ಸಾಧುವಾದುದು, ಈ ನಾಲ್ಕು ಮಾತನ್ನು ಹೇಳಿ, ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri G. V. GOWDA—The best efforts of the Hon'ble Minister for Revenue to convince the House on the justification of these survey reports have failed. I venture to submit that we do not have anything in the settlement reports as to the principles adopted and the procedure followed in determining the assessment proposed. I can gather from a preliminary reading of the report that some principles were enunciated by the Commissioner of Land Records.

We are aware that the Land Revenue Act came into force on 1st April 1964 and survey and resettlement work started in 1956 or 1957. Several revenue enactments were in force in the State in the various regions and survey and resettlement work should have started under the principles and procedures contemplated under those enactments One of my friends stated that the Commissioner has sent to Government his proposals of the principles to be adopted by the settlement officers but the Government have not so far approved them. It is not clarified whether the Government has issued any terms of reference under the various enactments in force. But the Minister has been telling us that settlement work has been done on a scientific basis. In the report given to me about Mysore, the Settlement Officer explains that he has been

appointed in a season of the year when the crop was not being harvested and he has no opportunity to conduct crop cutting experiments with the result that he has not been able to assess the yield in any given area. Of course, he made some enquiries in the local areas about the yield. Can we call this assessment 'scientific'? What the 'scientific' way has been, has not been explained in these reports. I want to know whether the Government have laid down clear principles or procedures for the officers to follow.

The survey and settlement work was done in the Madras area in 1913-14 and it was to be in force for 30 years. The then Madras Government declared a policy in 1937 that there would be no further revision and the rates then in force would not be enhanced. I do not say that we should not go in for revision on that ground. But my submission is that the settlement officers have not been guided properly in the matter of preparation of these reports. The proposals sent by the Commissioner for Land Records have not been approved by Government with the result that everything is *ab initio* void.

It is stated that one-sixteenth of gross produce has been taken for determining the standard rate. Gross produce depends on a variety of factors. It depends on the investment made, the labour employed and several other factors. If a ryot sows bad seeds even in a fertile soil, the result would be bad. Therefore I do not think it is proper to make an assessement on the gross produce. In some portions of the report, the settlement officer states that the cost of production is more than the income derived. If the officers are able to determine the income and assess on that, everyone would be happy. We do not take into consideration the capital cost and the interest that the land is likely to fetch in terms of money. We do not take into consideration the actual manual labour. All the members of a family of five may be employed and their wages are not taken into consideration. If all these factots are given due consideration, the income from land would be much less for the purpose of a ssessment. The statistics obtained by the settlement officer by way of enquiry can hardly bs scientific. A clerk in an office gets Rs. 1,200 annually but the ryot does not get that much after deducting capital cost, depreciation, labour expenses, etc. If we take all these things into consideration, we will find that he is not able to realise a net income Rs. 1,000. I do not say that the ryot should not pay any assessment but what I say is that it should be based on some retional basis; it must depend on the net income he derives.

Because of the peculiar situation of my taluk, it has been constituted into a separate zone. The then Government of Madras had conducted a survey and resettlement and revised the land revenue in 1937. Not only that, but they had further classified the soil into various categories. So far as my taluk is concerned, the officer has bifurcated it in two groups and in these two groups he has taken into consideration wet and dry land. Mulberry which is also grown on dry land has been given a new description, *viz.*, dry garden. I do not know how it can be classified like that. The Settlement Officer has not further classified the

(SRI G. V. GOWDA)

variout, types of soil. They have used a term called 'therm' and they have defied it. The Hon'ble Minister said that they would adopt a type of classification that was in vogue hitherto. If that is so, they should have made a mention of it in the report; but that has not been done. They have proposed the standard rate for cent per cent fertility of the soil. They have got to categorise the various types of land as wet, dry and garden. Further, they have to classify them as good medium and inferior under each of those types. They have not done that. That is not to be done after the House approves of this resolution; it has to be incorporated in the report itself. Section 116 contemplates several principles for the determination of the zones as well as for the determination of the standard rate. In my opinion, this report which should have concerned itself with survey and resettlement work and the principle and procedure for determining the standard rate contains so many other matters which are irrelevant. For instance, it says how many schools a particular zone has, how many drinking wells it has, what are the NES works undertaken there and so on and so forth. I do not understand why they should have found a place in this report. Probably, the idea of Government was that so much developmental work has been done in a particular region which justifies the enhancement of revenue assessment. They should have followed the principles enunciated in the old Acts but they have not done that. Therefore, it becomes void because it does not have Government sanction.

Then, the Hon'ble Minister said that the price for 5 years has been taken into consideration and the average has been struck and the gross value is determined. According to the Madras system, they used to take the average price for 30 nonfamine years...

SRI M. V. KRISHNAPPA.—In my speech I said that 77 per cent of the land revenue will go to the villages and taluk boards. Now, I learn it is 100 per cent. So, all the land revenue will be left with the villages: The 100 per cent is made up like this; 30 percent for Village Panchayats; 30 per cent for Taluk Boards; 10 per cent for Zilla Parishad; 7½ per cent for special encouragement: 7½ per cent for the weaker Taluk Board and Village Panchayats; 3 per cent for libraries under the Libraries Act, 12 per cent for collection charges.

DEPUTY SPEAKER.—The House will now adjourn to meet at 1 P. M. tomorrow.

The House adjourned at Six of the Clock to meet at One of the Clock on Wednesday, the 3rd March 1965.